# ಹಂಪಿ ಟೈಮ್ಸ್
HAMPI TIMES
ಕನ್ನಡ ದಿನಪತ್ರಿಕೆ
KANNADA DAILY


ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
Email: hampitimes@gmail.com | M:94486 33038


HAMPI TIMES No.1 Leading Local News Paper
90,000 E-PAPER READERS
94486 33038 NEWS PAPER ADD - THE BEST ADVERTISING PLATFORM TO BOOST YOUR BUSINESS
E-mail: hampitimes@gmail.com | # Valmiki Circle hospet-583201


ಸಂಪುಟ:02 • ಸಂಚಿಕೆ: 80 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 21.09.2024 • ಶನಿವಾರ • ಪುಟ:04 • ಬೆಲೆ:2
Volume:02 • Issue: 80 • PRGI No:KARKAN/2023/88055 • VIJAYANAGARA • 21.09.2024 • Saturday • Page:04 • Rs:2


ನಿಮ್ಮ ಸಂಸ್ಥೆಯ ಬ್ರ್ಯಾಂಡಿಂಗ್, ಉತ್ಪನ್ನ, ಸೇವೆಗಳ ಪ್ರಚಾರಕ್ಕಾಗಿ ಆಲೋಚಿಸುತ್ತಿದ್ದೀರಾ ?
HAMPI TIMES VIJAYANAGARA
ನಂ 1 ಜಿಲ್ಲಾಮಟ್ಟದ ದಿನಪತ್ರಿಕೆ
ಚಿಕ್ಕ ಮೊತ್ತ ದೊಡ್ಡ ಜಾಹೀರಾತು
ಸ್ಥಳೀಯ ಹಾಗೂ ವ್ಯಾಪಕ ಮಟ್ಟದಲ್ಲಿ ಜನಪ್ರಿಯ
90 ಸಾವಿರಕ್ಕೂ ಅಧಿಕ ಇ-ಪೇಪರ್ ಓದುಗರು
94486 33038 hampitimes@gmail.com
ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ
ಪ್ರಿಂಟ್ & ಡಿಜಿಟಲ್ ದಿನಪತ್ರಿಕೆ
Print & Digital News Paper
ಹಂಪಿ ಟೈಮ್ಸ್ ಇ-ಪೇಪರ್
ಹಂಪಿ ಟೈಮ್ಸ್ ವಿಸ್ತಾರ : ಕರ್ನಾಟಕ, ಮಹಾರಾಷ್ಟ್ರ, ಕೇರಳ, ತೆಲಂಗಾಣ, ತಮಿಳುನಾಡು, ಆಂಧ್ರಪ್ರದೇಶ, ಉತ್ತರ ಪ್ರದೇಶ, ಗುಜರಾತ್, ಹರಿಯಾಣ, ರಾಜಸ್ಥಾನ & ಅಮೇರಿಕಾ, ಇಂಗ್ಲೆಂಡ್, ಕೆನಡಾ ಇತರೆ ರಾಷ್ಟ್ರಗಳಲ್ಲಿರುವ ಕನ್ನಡ ಓದುಗರ ಕೈಯಲ್ಲಿ ಹಂಪಿ ಟೈಮ್ಸ್ ಇ ಪೇಪರ್


# ವಿಜಯನಗರದಲ್ಲಿ ಟೂರಿಸಂ ಪಾರ್ಕ್ ವಿಮಾನ ನಿಲ್ದಾಣ ನಿರ್ಮಾಣಕ್ಕೆ ಒತ್ತಾಯ

## ಶಾಸಕ ಗವಿಯಪ್ಪ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಎಂ.ಬಿ.ಪಾಟೀಲ್‌ಗೆ ಮನವಿ



■ **ಹಂಪಿ ಟೈಮ್ಸ್ ಹೊಸಪೇಟೆ**
ಐತಿಹಾಸಿಕ ವಿಜಯನಗರ ಜಿಲ್ಲೆಯಲ್ಲಿ ವಿಮಾನ ನಿಲ್ದಾಣ ನಿರ್ಮಾಣಕ್ಕೆ ಸಂಬಂಧಿಸಿದಂತೆ, ವಿಜಯನಗರ ವಿಧಾನಸಭಾ ಕ್ಷೇತ್ರದ ಶಾಸಕ ಎಚ್. ಆರ್. ಗವಿಯಪ್ಪ ಶುಕ್ರವಾರ ಬೆಂಗಳೂರಿನಲ್ಲಿ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರಾದ ಎಂ.ಬಿ.ಪಾಟೀಲ್ ಅವರನ್ನು ಭೇಟಿ ಮಾಡಿ ಚರ್ಚಿಸಿದರು.

ವಿಜಯನಗರ ಜಿಲ್ಲೆಯು ಪ್ರಾಕೃತಿಕವಾಗಿ ತನ್ನದೇ ವಿಶೇಷತೆಯನ್ನು ಹೊಂದಿದೆ. ಹಂಪಿಯು ಜಾಗತಿಕವಾಗಿ ಹೆಸರುವಾಸಿಯಾಗಿದೆ. ಪ್ರತಿ ದಿನ ಹಂಪಿಗೆ ಸಾವಿರಾರು ಸಂಖ್ಯೆಯಲ್ಲಿ ಪ್ರವಾಸಿಗರು ಅಗಮಿಸುತ್ತಾರೆ. ಹಂಪಿ ಸುತ್ತಲು ಪ್ರಸಿದ್ಧ ಧಾರ್ಮಿಕ ತಾಣಗಳಾದ ಅಂಜನಾದ್ರಿ, ಹುಲಿಗಿ ತಾಣಗಳಿವೆ. ಮೂರ್ನಾಲ್ಕು ರಾಜ್ಯಗಳಿಗೆ ನೀರುಣಿಸುವ ಜೀವನದಿ ತುಂಗಭದ್ರಾ ಇಲ್ಲಿದೆ. ಇಂತಹ ವಿಶೇಷತೆಯ ವಿಜಯನಗರ ಜಿಲ್ಲೆಯಲ್ಲಿ ವಿಮಾನ ನಿಲ್ದಾಣ ನಿರ್ಮಾಣದ ಅವಶ್ಯಕತೆ ಇದೆ ಎಂದು ಶಾಸಕ ಗವಿಯಪ್ಪ ಅವರು ಸಚಿವರಿಗೆ ಮನವರಿಕೆ ಮಾಡಿದರು. ಐತಿಹಾಸಿಕ ಹಂಪಿ ವ್ಯಾಪ್ತಿಯಲ್ಲಿ ಟೂರಿಸಂ ಪಾರ್ಕ್ ನಿರ್ಮಾಣ ಹಾಗೂ ಹೊಸಪೇಟೆ ತಾಲ್ಲೂಕು ವ್ಯಾಪ್ತಿಯಲ್ಲಿ ಸ್ಟೀಲ್ ಪಾರ್ಕ್ ನಿರ್ಮಾಣಕ್ಕೆ ಸಂಬಂಧಿಸಿದಂತೆ ಶಾಸಕರು ಸಚಿವರಿಗೆ ಮನವಿ ಸಲ್ಲಿಸಿದರು.

# ಜಿಲ್ಲಾ ಪತ್ರಿಕಾ ಭವನದಲ್ಲಿ ಎಲ್ಲಾ ಪತ್ರಕರ್ತರಿಗೆ ಮುಕ್ತ ಅವಕಾಶ : ತಹಶೀಲ್ದಾರ್ ಶೃತಿ ಮಳ್ಳಪ್ಪ ಗೌಡ



■ **ಹಂಪಿ ಟೈಮ್ಸ್ ಹೊಸಪೇಟೆ**
ವಿಜಯನಗರ ಜಿಲ್ಲಾ ಪತ್ರಿಕಾ ಭವನದಲ್ಲಿ ಎಲ್ಲಾ ಪತ್ರಕರ್ತರಿಗೆ ಮುಕ್ತ ಅವಕಾಶ ನೀಡಬೇಕೆಂದು ಆಗ್ರಹಿಸಿ ಕರ್ನಾಟಕ ಪತ್ರಕರ್ತರ ಸಂಘದ ಸದಸ್ಯರು ತಾಲೂಕು ಕಚೇರಿ ಮುಂಭಾಗದಲ್ಲಿ ಶುಕ್ರವಾರ ಬೆಳಿಗ್ಗೆಯಿಂದ ಉಪವಾಸ ಮೌನ ಸತ್ಯಾಗ್ರಹ ನಡೆಸಿದರು.

ಬೆಳಿಗ್ಗೆಯಿಂದ ಡಿಸಿ ಆಗಮನಕ್ಕಾಗಿ ಪತ್ರಕರ್ತರು ಕಾದು ಕುಳಿತಿದ್ದರು. ಶುಕ್ರವಾರ ರಾತ್ರಿ ತಹಶೀಲ್ದಾರ್ ಶೃತಿ ಎಂ.ಗೌಡ ಮತ್ತು ವಾರ್ತಾಧಿಕಾರಿ ಗವಿಸಿದ್ದಪ್ಪ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ, ಬೇಡಿಕೆಗಳನ್ನು ಆಲಿಸಿ, ಮನವಿ ಸ್ವೀಕರಿಸಿದರು. ತಹಶಿಲ್ದಾರ್ ಮಾತನಾಡಿ, ಪತ್ರಕರ್ತರ ಸಮಸ್ಯೆಗಳನ್ನು ಆಲಿಸಿ ಕೂಡಲೇ ತಮ್ಮ ಮನವಿಗೆ ಸ್ಪಂದಿಸಲಾಗುವುದು. ಪತ್ರಿಕಾ ಭವನದ ಕುರಿತು ಜಿಲ್ಲಾಧಿಕಾರಿಗಳೊಂದಿಗೆ ಈಗಾಗಲೇ ಸಮಿತಿ ರಚನೆಯಾಗಿದ್ದು, ಸಭೆಯಲ್ಲಿ ಜಿಲ್ಲಾ ಪತ್ರಿಕಾ ಭವನವನ್ನಾಗಿಸಿ ಅದಕ್ಕೆ ಸಂಬಂಧಿಸಿದಂತೆ ಎಲ್ಲಾ ತರಹದ ದಾಖಲೆಗಳನ್ನು ಸಿದ್ಧಗೊಳಿಸಿ. ಸುದ್ದಿಗೋಷ್ಠಿಗಳಿಗೆ ಯಾವುದೇ ತಾರತಮ್ಯಗಳಿಲ್ಲದೆ ಜಿಲ್ಲೆಯ ಎಲ್ಲಾ ಪತ್ರಕರ್ತರಿಗೆ ಮುಕ್ತ ಪ್ರವೇಶ ಕಲ್ಪಿಸಿಕೊಡಬೇಕೆಂದು ತೀರ್ಮಾನಿಸಲಾಗಿದೆ. ಈ ಬಗ್ಗೆ ಇನ್ನೂ ಒಂದು ವಾರದೊಳಗೆ ಜಿಲ್ಲಾಧಿಕಾರಿಗಳ ನಿರ್ದೇಶನ ಮೇರೆಗೆ ಕಾರ್ಯರೂಪಕ್ಕೆ ತರಲಾಗುವುದು ಎಂದು ವಾರ್ತಾ ಅಧಿಕಾರಿ ಜಿಲ್ಲಾ ಹಿರಿಯ ಸಹಾಯಕ ನಿರ್ದೇಶಕರಾದ ಗವಿಸಿದ್ದಪ್ಪ ಹೊಸಮನಿ ಭರವಸೆ ನೀಡಿದ ನಂತರ ಉಪವಾಸ ಸತ್ಯಾಗ್ರಹವನ್ನು ಅಂತ್ಯಗೊಳಿಸಲಾಯಿತು.

ಈ ಸಂದರ್ಭದಲ್ಲಿ ಅಮರಣಾಂತ ಉಪವಾಸ ಮೌನ ಸತ್ಯಾಗ್ರಹ ಕುಳಿತ ಕೆ. ಬಿ.ಹಿರೇಮಠ, ಕರ್ನಾಟಕ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷರಾದ ಬಿ ಹೆಚ್ ಎಸ್ ರಾಜು, ವಿ.ಗಾಳೆಪ್ಪ, ನಾಗರಾಜ, ರಾಮು ಅಶ್ರೀತ್, ಪಣಿಂದ್ರ ಗೌಡ, ಎ. ಚಿದಾನಂದ, ಬ್ರಹ್ಮಯ್ಯ, ಗೀತಾ ಸುರೇಶ್, ಮಹಮದ್ ಗೌಸ್, ಎಲ್. ಮಂಜುನಾಥ, ರಾಘವೇಂದ್ರ, ವೆಂಕಟೇಶ್, ಮಾಂತೇಶ್ ಶೆಟ್ಟಲರ್, ಎಸ್. ಆರ್.ಗಾಯತ್ರಿ ಇದ್ದರು.




ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿಗಾಗಿ ಹಂಪಿ ಟೈಮ್ಸ್ ದಿನಪತ್ರಿಕೆ ಓದಿರಿ ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
94486 33038


## ಮೈಕ್ರೋ ನ್ಯೂಸ್

### ಅನಿಕೇತನ ತ್ರೈಮಾಸಿಕಕ್ಕೆ ಲೇಖನಗಳ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**
2023 ಮತ್ತು 2024ನೇ ಸಾಲಿನ ಅನಿಕೇತನ ತ್ರೈಮಾಸಿಕಗಳಿಗೆ ಲೇಖನಗಳನ್ನು ಕಳುಹಿಸಿಕೊಡುವಂತೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ರಿಜಿಸ್ಟ್ರಾರ್ ಕರಿಯಪ್ಪ ಎನ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಕನ್ನಡ ಮತ್ತು ಇಂಗ್ಲೀಷ್ ಅನಿಕೇತನ ತ್ರೈಮಾಸಿಕಗಳಿಗೆ ಸಂಪಾದಕರುಗಳನ್ನು ನೇಮಿಸಿದ್ದು, ಅನಿಕೇತನ ಕನ್ನಡ–2023 ಪ್ರಕಾರಕ್ಕೆ ಡಾ ಜೆ.ಕರಿಯಪ್ಪ ಮಾಳಿಗೆ ಮೊ.ಸಂ: 9482108756, ಅನಿಕೇತನ ಕನ್ನಡ–2024 ಪ್ರಕಾರಕ್ಕೆ ಡಾ ಬೆಳ್ಳೂರು ವೆಂಕಟಪ್ಪ ಮೊ.ಸಂ: 9964425605, ಅನಿಕೇತನ ಇಂಗ್ಲೀಷ್–2023 ಪ್ರಕಾರಕ್ಕೆ ಡಾ ರಾಜಶೇಖರ ಮಠಪತಿ ಮೊ.ಸಂ: 9242121461, ಅನಿಕೇತನ ಇಂಗ್ಲೀಷ್–2024 ಪ್ರಕಾರಕ್ಕೆ ನಿಸಾರ್ ಅಹಮದ್ ಮೊ.ಸಂ: 9844702929, ಲೇಖನಗಳನ್ನು ಕಳುಹಿಸಲು ಇಚ್ಛಿಸುವವರು ಸಂಬಂಧಪಟ್ಟ ಸಂಪಾದಕರುಗಳನ್ನು ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

### ವಿದ್ಯುತ್ ಗ್ರಾಹಕರ ಸಂವಾದ ಸಭೆ: ಸೆಪ್ಟಂಬರ್ 21ಕ್ಕೆ

**ಹಂಪಿ ಟೈಮ್ಸ್ ಹೊಸಪೇಟೆ**
ಹೊಸಪೇಟೆ ಜೆಸ್ಕಾಂನ ನಗರ ಉಪ ವಿಭಾಗ–1 ಮತ್ತು ನಗರ ಉಪವಿಭಾಗ–2ರಲ್ಲಿನ ವಿದ್ಯುತ್ ಗ್ರಾಹಕರ ಸಂವಾದ ಸಭೆಯನ್ನು ಸೆಪ್ಟಂಬರ್ 21ರಂದು ಮಧ್ಯಹ್ನಾ 3:30 ರಿಂದ ಸಂಜೆ 5 ಗಂಟೆಯವರೆಗೆ ನಗರ ಉಪ–ವಿಭಾಗ–01ರ ಕಚೇರಿಯಲ್ಲಿ ಏರ್ಪಡಿಸಲಾಗಿದೆ. ಹೊಸಪೇಟೆ ನಗರದ ವಿದ್ಯುತ್ ಗ್ರಾಹಕರು ಸಭೆಗೆ ಭಾಗವಹಿಸಿ ವಿದ್ಯುತ್ ಸಮಸ್ಯೆ ಇದ್ದಲ್ಲಿ ತಮ್ಮ ಅಹವಾಲುಗಳನ್ನು ಸಲ್ಲಿಸಿ ಪರಿಹರಿಸಿಕೊಳ್ಳಬಹುದು ಎಂದು ಹೊಸಪೇಟೆ ಜೆಸ್ಕಾಂನ ಕಾರ್ಯ ಮತ್ತು ಪಾಲಕ ನಗರ ಉಪ–ವಿಭಾಗ–01ರ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಡಾ. ಹ್ಯಾರಡದ ರೇಣುಕ ಅವರ ಕೃತಿಗಳ ಬಿಡುಗಡೆ ಸಮಾರಂಭ ಸೆ.21ಕ್ಕೆ

**ಹಂಪಿ ಟೈಮ್ಸ್ ಹೊಸಪೇಟೆ**
ವಿಜಯನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ವಿದ್ಯಾನಿಧಿ ಪ್ರಕಾಶನ ಗದಗ ಮತ್ತು ತಾರ ಪ್ರಕಾಶನ ಮೈಸೂರು ಇವರ ಸಹಯೋಗದೊಂದಿಗೆ "ಡಾ. ಹ್ಯಾರಡದ ರೇಣುಕ ಅವರ ಕೃತಿಗಳ ಬಿಡುಗಡೆ" ಸಮಾರಂಭವನ್ನು ಸೆಪ್ಟೆಂಬರ್ 21ರಂದು ಮಧ್ಯಾಹ 12ಗಂಟೆಗೆ ಕಮಲಾಪುರದ ಯಾತ್ರಿ ನಿವಾಸ (ರೈತ ಭವನ) ದಲ್ಲಿ ಆಯೋಜಿಸಲಾಗಿದೆ.

ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ ಡಿ.ವಿ.ಪರಮಶಿವಮೂರ್ತಿ ಅವರು ಅಧ್ಯಕ್ಷತೆ ವಹಿಸಿ, ಪುಸ್ತಕ ಬಿಡುಗಡೆ ಮಾಡುವರು. ಹೊಸಪೇಟೆಯ ಶಿಕ್ಷಕರಾದ ಡಾ. ದಿವಾಕರ ನಾರಾಯಣ ಅವರು "ಆಧುನಿಕ ಕನ್ನಡ ವ್ಯಾಕರಣದ ಅಧ್ಯಯನಗಳ ಸ್ವರೂಪ" ಪುಸ್ತಕದ ಬಗ್ಗೆ, ಹರಪನಹಳ್ಳಿಯ ಶಿಕ್ಷಕರಾದ ಕಾಡಜ್ಜ ಮಂಜಪ್ಪ ಅವರು "ಶ್ರೀ ಮೈಲಾರಲಿಂಗೇಶ್ವರ ಸಾಂಗತ್ಯ" ಪುಸ್ತಕ ಮತ್ತು ಶಿಕ್ಷಕರಾದ ಎಸ್.ರಮೇಶ ಅವರು >>4

### ನಾಗೇನಹಳ್ಳಿಯಲ್ಲಿ ಶಾಲಾಪೂರ್ವ ಶಿಕ್ಷಣ ಚಟುವಟಿಕೆಗಳ ಮೂರು ದಿನಗಳ ತರಬೇತಿ ಕಾರ್ಯಾಗಾರ

# ಅಂಗನವಾಡಿ ಮೇಲ್ವಿಚಾರಕಿಯರಿಗೆ ಶಿಕ್ಷಣ ತರಬೇತಿ

## ಸಿಡಿಪಿಓ ಸಿಂಧೂ ಅಂಗಡಿ ಹೇಳಿಕೆ | 3 ರಿಂದ 6 ವರ್ಷದ ಮಕ್ಕಳ ಕಲಿಕೆ ಆರಂಭ



■ **ಹಂಪಿ ಟೈಮ್ಸ್ ಹೊಸಪೇಟೆ**
ನಾಗೇನಹಳ್ಳಿ 4ನೇ ಅಂಗನವಾಡಿ ಕೇಂದ್ರದಲ್ಲಿ ಸೆಪ್ಟೆಂಬರ್ 19ರಿಂದ 5ನೇ ಹಂತದ ಶಾಲಾಪೂರ್ವ ಶಿಕ್ಷಣ ಚಟುವಟಿಕೆಗಳ ಮೂರು ದಿನಗಳ ತರಬೇತಿ ಕಾರ್ಯಗಾರ ನಡೆಯಿತು.

ಹೊಸಪೇಟೆ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ ಚಿತವಾಡಗಿ 1ನೇ ವಲಯದ ನಾಗೇನಹಳ್ಳಿ 4ನೇ ಅಂಗನವಾಡಿ ಕೇಂದ್ರದಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, ವಿಜಯನಗರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಕಲಿಕೆ ಟಾಟಾ ಟ್ರಸ್ಟ್ ಸಹಯೋಗದಲ್ಲಿ ಶಾಲಾಪೂರ್ವ ಶಿಕ್ಷಣ ಬಲವರ್ಧನೆ ಕಾರ್ಯಕ್ರಮದ ಅಡಿ ಚಿತವಾಡಗಿಯ 1ನೇ ವಲಯದ ಅಂಗನವಾಡಿ ಕಾರ್ಯಕರ್ತೆಯರಿಗೆ ವಲಯಮಟ್ಟದಲ್ಲಿ 5ನೇ ಹಂತದ ಶಾಲಾಪೂರ್ವ ಶಿಕ್ಷಣ ಚಟುವಟಿಕೆಗಳ ಮೂರು ದಿನಗಳ ತರಬೇತಿ ಕಾರ್ಯಗಾರವನ್ನು ಹಮ್ಮಿಕೊಳ್ಳಲಾಗಿತ್ತು.

ತರಬೇತಿ ಕಾರ್ಯಕ್ರಮವನ್ನು ಹೊಸಪೇಟೆಯ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಾದ ಸಿಂಧೂ ಅಂಗಡಿ ಅವರು ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ವಿಜಯನಗರ ಜಿಲ್ಲೆಯು ಶಾಲಾಪೂರ್ವ ಶಿಕ್ಷಣದಲ್ಲಿ ದೇಶಕ್ಕೆ ಮಾದರಿಯಾಗುವಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಮತ್ತು ಕಲಿಕೆ – ಟಾಟಾ ಟ್ರಸ್ಟ್ ಮಹತ್ವದ ಪಾತ್ರವಹಿಸಿದೆ. ಅಂಗನವಾಡಿ ಕೇಂದ್ರಗಳಲ್ಲಿ 3 ರಿಂದ 6 ವರ್ಷದ ಮಕ್ಕಳ ಕಲಿಕೆಯನ್ನು, ಆಟಗಳ ಮತ್ತು ಚಟುವಟಿಕೆಗಳನ್ನು ಕಲಿಸಲು ಅಂಗನವಾಡಿ ಮೇಲ್ವಿಚಾರಕಿಯರಿಗೆ ಸಾಮರ್ಥ್ಯಾಭಿವೃದ್ಧಿಗೊಳಿಸಲಾಗುತ್ತಿದೆ. ಮೇಲ್ವಿಚಾರಕಿಯರಿಂದಲೇ ಶಿಕ್ಷಕಿಯರಿಗೆ ಸಾಮರ್ಥ್ಯವನ್ನು ವೃದ್ಧಿಸಿ ಮಕ್ಕಳಿಗೆ ಪರಿಣಾಮಕಾರಿಯಾಗಿ ಹಾಗೂ ಗುಣಾತ್ಮಕ ಶಾಲಾಪೂರ್ವ ಶಿಕ್ಷಣವನ್ನು ನೀಡುವಲ್ಲಿ ಸಮರ್ಥರಾಗಿದ್ದಾರೆ. ಇಂದು ಮಕ್ಕಳ ಪೋಷಕರ ಅಭಿಲಾಶೆಯಂತೆ ಈ ತರಬೇತಿಯಲ್ಲಿ ಅಕ್ಷರ ಅಭ್ಯಾಸ ಚಟುವಟಿಕೆಯನ್ನು ಸಹ ಮಕ್ಕಳಿಗೆ ಕಲಿಸುವ ಚಟುವಟಿಕೆಗಳನ್ನು ಅಂಗನವಾಡಿ ಶಿಕ್ಷಕಿಯರಿಗೆ ನೀಡುತ್ತಿದ್ದಾರೆ ಎಂದರು.

ಸಮಗ್ರ ಶಿಶು ಅಭಿವೃದ್ಧಿ ಯೋಜನೆ ಹಿರಿಯ ಮೇಲ್ವಿಚಾರಕಿಯರಾದ ಅಂಬುಜ ಅವರು ತರಬೇತಿಯ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು. ಶಾಲಾಪೂರ್ವ ಶಿಕ್ಷಣ ಬಲವರ್ಧನೆ ಕಾರ್ಯಕ್ರಮದ ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕ ಕೊಟ್ರೇಶ ಯರಡ ಕೇರಿ ಮಾತನಾಡಿ, ಶಾಲಾಪೂರ್ವ ಶಿಕ್ಷಣ ಕಾರ್ಯಕ್ರಮವು ಜಿಲ್ಲೆಯಲ್ಲಿ ತುಂಬ ಚೆನ್ನಾಗಿ ಅನುಷ್ಠಾನವಾಗುತ್ತಿದೆ. ಇದಕ್ಕೆ ಜಿಲ್ಲೆಯ ಎಲ್ಲಾ ಅಧಿಕಾರಿವರ್ಗದವರು ಸಹಕಾರ ನೀಡುತ್ತಿದ್ದಾರೆ ಎಂದು ಹೇಳಿದರು. ವಲಯ ಮೇಲ್ವಿಚಾರಕ ಎಲ್.ಡಿ ನಧಾಫ್, ಮೇಲ್ವಿಚಾರಕರಾದ ಶ್ರಂತಿ ಪ್ರಮೀಳ ಪಾಟಿಲ್ ನಿರ್ವಹಿಸಿದರು.

# ಕಾರ್ಮಿಕರ ಕ್ಷೇಮಾಭಿವೃದ್ಧಿಗಾಗಿ ಹಲವು ಯೋಜನೆಗಳು ಜಾರಿ

■ **ಹಂಪಿ ಟೈಮ್ಸ್ ಹೊಸಪೇಟೆ**
ಸರಕಾರ ಕಾರ್ಮಿಕರ ಕ್ಷೇಮಾಭಿವೃದ್ಧಿಗಾಗಿ ಹಲವು ಯೋಜನೆಗಳನ್ನು ಜಾರಿಗೆ ತಂದಿದೆ. ಅಸಂಘಟಿತ ಕಾರ್ಮಿಕರು, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಇದರ ಮುಖ್ಯ ಉದ್ದೇಶವಾಗಿದೆ ಎಂದು ವಿಜಯನಗರ ಉಪ ವಿಭಾಗದ ಕಾರ್ಮಿಕ ಅಧಿಕಾರಿಗಳು ತಿಳಿಸಿದ್ದಾರೆ.

**ವಿವಿಧ ಸೌಲಭ್ಯಗಳು:** ಕಾರ್ಮಿಕರಾಗಿ ಸೇವೆ ಸಲ್ಲಿಸುತ್ತಿರುವ ವ್ಯಕ್ತಿ ಸಾವನ್ನಪ್ಪಿದರೆ ಅಥವಾ ಅಪಘಾತವಾಗಿ ಶಾಶ್ವತ ದುರ್ಬಲತೆ ಹೊಂದಿದರೆ, ಕಾರ್ಮಿಕ ಕುಟುಂಬಕ್ಕೆ ಸರಕಾರದವತಿಯಿಂದ ಸಹಾಯಹಸ್ತ ನೀಡಲಾಗುತ್ತದೆ.

**ಮದುವೆ ಸಹಾಯಧನ:** (ಗೃಹ ಲಕ್ಷ್ಮೀ ಬಾಂಡ್) ಫಲಾನುಭವಿ ಅಥವಾ ಅವರ ಇಬ್ಬರು ಮಕ್ಕಳ ಮದುವೆಗೆ ತಲಾ ರೂ.60,000 ವರೆಗೆ ಸಹಾಯಧನ.


ಹೆರಿಗೆ ಸೌಲಭ್ಯ:(ತಾಯಿ ಲಕ್ಷ್ಮೀ ಬಾಂಡ್) ಮಹಿಳಾ ಫಲಾನುಭವಿಯ ಮೊದಲ ಎರಡು ಮಗುವಿನ ಜನನಕ್ಕೆ ರೂ.50,000 ವರೆಗೆ ಸಹಾಯಧನ.

**ಶೈಕ್ಷಣಿಕ ಸಹಾಯಧನ:** (ಕಲಿಕೆ ಭಾಗ್ಯ) ಫಲಾನುಭವಿಯ ಇಬ್ಬರು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸಹಾಯಧನ.

**ವೈದ್ಯಕೀಯ ಸಹಾಯಧನ:** (ಕಾರ್ಮಿಕ ಆರೋಗ್ಯ ಭಾಗ್ಯ) ನೋಂದಾಯಿತ ಫಲಾನುಭವಿ ಹಾಗೂ ಅವರ ಅವಲಂಭಿತರಿಗೆ ರೂ.300 ರಿಂದ ರೂ.20,000 ವರೆಗೆ ಸಹಾಯಧನ.

**ಅಪಘಾತ ಪರಿಹಾರ:** ಕಾರ್ಮಿಕರು ಮರಣ ಹೊಂದಿದ್ದಲ್ಲಿ ರೂ.5,00,000 ಹಾಗೂ ಸಂಪೂರ್ಣ ಶಾಶ್ವತ ದುರ್ಬಲತೆಯಾದಲ್ಲಿ ರೂ.2,00,000 ಮತ್ತು ಭಾಗಶಃ ಶಾಶ್ವತ ದುರ್ಬಲತೆಯಾದಲ್ಲಿ ರೂ.1,00,000 ವರೆಗೆ ಸಹಾಯಧನ ನೀಡಲಾಗುವುದು.

**ಪ್ರಮುಖ ವೈದ್ಯಕೀಯ ವೆಚ್ಚ ಸಹಾಯಧನ:** (ಕಾರ್ಮಿಕಚಿಕಿತ್ಸಾ ಭಾಗ್ಯ) ಔದ್ಯೋಗಿಕ



ಖಾಯಿಲೆಗಳ ಚಿಕಿತ್ಸೆಗಳಿಗೆ ರೂ.2,00,000 ವರೆಗೆ ವೈದ್ಯಕೀಯ ವೆಚ್ಚ ಸಹಾಯಧನ (ಕಾರ್ಮಿಕ ಚಿಕಿತ್ಸಾ ಭಾಗ್ಯ) ಔದ್ಯೋಗಿಕ ಖಾಯಿಲೆಗಳ ಚಿಕಿತ್ಸೆಗಳಿಗೆ ರೂ.20,000 ವರೆಗೆ ಸಹಾಯಧನ ದೊರೆಯುವುದು.

**ತಾಯಿ ಮಗು ಸಹಾಯ ಹಸ್ತ:** ಮಹಿಳಾ ಫಲಾನುಭವಿಯು ಮಗುವಿಗೆ ಜನ್ಮ ನೀಡಿದ ಸಂದರ್ಭದಲ್ಲಿ ಆಕೆಯ ಮಗುವಿನ ಶಾಲಾ ಪೂರ್ವ ಶಿಕ್ಷಣ ಮತ್ತು ಪೌಷ್ಠಿಕತೆಗಾಗಿ ಮಗುವಿಗೆ ಮೂರು ವರ್ಷಗಳು ತುಂಬುವವರೆಗೆ ವಾರ್ಷಿಕ ರೂ.6,000 ಗಳ ಸಹಾಯಧನ ನೀಡಲಾಗುವುದು.

**ಪಿಂಚಣಿ ಸೌಲಭ್ಯ:** ಮೂರು ವರ್ಷ ಸದಸ್ಯತ್ವದೊಂದಿಗೆ 60 ವರ್ಷ ಪೂರೈಸಿದ ಫಲಾನುಭವಿಗೆ ಮಾಸಿಕ ರೂ.3,000 ವರೆಗೆ ಸಹಾಯಧನ. ಕುಟುಂಬ ಪಿಂಚಣಿ ಸೌಲಭ್ಯ ಅಡಿಯಲ್ಲಿ ಮೃತ ಪಿಂಚಣಿದಾರರ ಪತಿ, ಪತ್ನಿಗೆ ಮಾಸಿಕ ರೂ.1,500 ವರೆಗೆ, ದುರ್ಬಲತೆ ಪಿಂಚಣಿ ಅಡಿಯಲ್ಲಿ ನೋಂದಾಯಿತ ಫಲಾನುಭವಿಯು ಖಾಯಿಲೆಗಳಿಂದ ಅಥವಾ ಕಟ್ಟಡ ಕಾಮಗಾರಿಗಳ ಅಪಘಾತದಿಂದ ಶಾಶ್ವತ, ಭಾಗಶಃ ಅಂಗವಿಕಲತೆ ಹೊಂದಿದ್ದರೆ ಮಾಸಿಕ ರೂ.2,000, ಪಿಂಚಣಿ ಹಾಗೂ ಶೇಕಡವಾರು ದುರ್ಬಲತೆಯನ್ನಾಧರಿಸಿ ರೂ.2,00,000 ದವರೆಗೆ ಅನುಗ್ರಹ ರಾಶಿ ಸಹಾಯಧನ ನೀಡಲಾಗುವುದು.

**ಅಂತ್ಯಕ್ರಿಯೆ ವೆಚ್ಚ:** ರೂ.4,000 ಹಾಗೂ ಅನುಗ್ರಹ ರಾಶಿ ರೂ.71,000 ಸಹಾಯಧನ ಸೌಲಭ್ಯಗಳು ನೀಡಲಾಗುವುದು.

**ಗಿಗ್ ಕಾರ್ಮಿಕರ ಸೌಲಭ್ಯಗಳು:** ಅಪಘಾತದಿಂದ ಮರಣ ಹೊಂದಿದಲ್ಲಿ ವಿಮಾ ಪರಿಹಾರ ರೂ.2.00 ಲಕ್ಷ ಹಾಗೂ ಜೀವ ವಿಮಾ ರೂ.2.00 ಲಕ್ಷ ಸೇರಿ ಒಟ್ಟು ರೂ.4.00 ಲಕ್ಷಗಳು, ಅಪಘಾತದಿಂದ ಶಾಶ್ವತ ದುರ್ಬಲತೆ ಹೊಂದಿದಲ್ಲಿ ರೂ.2.00 ಲಕ್ಷಗಳವರೆಗೆ ಸಹಾಯಧನ, ಆಸ್ಪತ್ರೆ ವೆಚ್ಚ ಮರುಪಾವತಿ ರೂ. 1 ಲಕ್ಷಗಳ ವರೆಗೆ, (ಅಪಘಾತ ಪ್ರಕರಣಗಳಲ್ಲಿ ಮಾತ್ರ) ಜೀವ ವಿಮಾ ರೂ.2.00 ಲಕ್ಷಗಳು ನೀಡಲಾಗುವುದು.

**ದಿನ ಪತ್ರಿಕೆ ವಿತರಣಾ ಕಾರ್ಮಿಕರ ಸೌಲಭ್ಯಗಳು:** ಅಪಘಾತದಿಂದ ಮರಣ ಹೊಂದಿದಲ್ಲಿ ರೂ.2.00 ಲಕ್ಷ, ಅಪಘಾತದಿಂದ ಶಾಶ್ವತ ದುರ್ಬಲತೆ ಹೊಂದಿದಲ್ಲಿ ರೂ.2.00 ಲಕ್ಷಗಳವರೆಗೆ (ಶೇಕಡ ವಾರು ದುರ್ಬಲತೆ ಆಧಾರದ ಮೇಲೆ), ಅಪಘಾತ ಅಥವಾ ಮಾರಾಣಾಂತಿಕ ಕಾಯಿಲೆ ಅಥವಾ ಗಂಭೀರ ಅನಾರೋಗ್ಯಕ್ಕೆ ತುತ್ತಾದಲ್ಲಿ ಆಸ್ಪತ್ರೆ ವೆಚ್ಚ ಮರುಪಾವತಿ 1.00 ಲಕ್ಷಗಳವರೆಗೆ ನೀಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

**ತಿಳಿ ವಿಜ್ಞಾನ**

## ಪಕ್ಷಿಗಳು ಏಕೆ ವಿದ್ಯುತ್ ತಂತಿಗಳ ಸ್ಪರ್ಶದಿಂದ ಸಾಯುವುದಿಲ್ಲ

■ ರಾಜ್‌ಶೇಖರ
shekarraaj7@gmail.com

ವಿದ್ಯುತ್ ತಂತಿಗಳ ಮೇಲೆ ಪಕ್ಷಿಗಳು ಕುಳಿತಿರುವಾಗ ಅವುಗಳಿಗೆ ವಿದ್ಯುತ್ ಶಾಕ್ ಹೊಡೆಯುವುದಿಲ್ಲ..

ಪಕ್ಷಿಗಳಿಗೆ ವಿದ್ಯುತ್ ನಿರೋಧಕ ಶಕ್ತಿ ಮಾನವ ದೇಹಕ್ಕಿಂತ ಹೆಚ್ಚು ಎಂದು ನಾವು ಅಂದುಕೊಳ್ಳುವುದಾದರೆ ಅದು ತಪ್ಪು ಗ್ರಹಿಕೆ. ಕೇವಲ ಸೊಳ್ಳೆ ಬ್ಯಾಟ್ನಿಂದ ಸೊಳ್ಳೆಗಳು ಸಾಯುವುದಾದರೆ ಪಕ್ಷಿಗಳು ಹೆಚ್ಚು ವೋಲ್ಟೇಜ್ ಇರುವ ತಂತಿಗಳ ಸ್ಪರ್ಶದಿಂದ ಖಂಡಿತ ಸಾಯಬಹುದು. ಆದರೆ...

ಇದರಲ್ಲಿ ಭೌತ ವಿಜ್ಞಾನ ನಿಯಮವಿದೆ. ತಂತಿಗಳಲ್ಲಿ ವಿದ್ಯುತ್ ಹರಿಯಲು ವೋಲ್ಟೇಜ್ ವ್ಯತ್ಯಾಸ ಮುಖ್ಯ. (ನೀರು ಎತ್ತರ ಪ್ರದೇಶದಿಂದ ತಗ್ಗಿನ ಪ್ರದೇಶಕ್ಕೆ ಹರಿಯುವ ಹಾಗೆ. ಅಥವಾ ಶಾಖ ಹೆಚ್ಚು ಉಷ್ಣತೆಯಿಂದ ಕಡಿಮೆ ಉಷ್ಣತೆ ಕಡೆ ಹರಿಯುವ ಹಾಗೆ.)



ಒಂದು ಪಕ್ಷಿ ಒಂದು ತಂತಿಯ(ನಿರ್ದಿಷ್ಟ ತಂಟಣಚಿಂಜ) ಮೇಲೆ ಕುಳಿತಾಗ ಪಕ್ಷಿಯ ದೇಹದ ಮೂಲಕ ಹರಿದು ಅದೇ ತಂತಿಗೆ ತಲುಪಬೇಕು. ಎರಡು ಬದಿಗಳು (ಪಕ್ಷಿಯ ಕಾಲಿನ ಸ್ಪರ್ಶ ) ಒಂದೇ ವೋಲ್ಟೇಜ್ ನಲ್ಲಿ ಇರುವುದರಿಂದ, ವೋಲ್ಟೇಜ್ ವ್ಯತ್ಯಾಸ ಶೂನ್ಯವಾಗುವುದು. ಇದರಿಂದ ಪಕ್ಷಿಯ ದೇಹದ ಮೂಲಕ ವಿದ್ಯುತ್ ಹರಿಯುವುದಿಲ್ಲ. ಮನುಷ್ಯನ ದೇಹ, ಪ್ರಾಣಿ ಪಕ್ಷಿಗಳ ದೇಹಗಳು ಉತ್ತಮ ವಿದ್ಯುತ್ ವಾಹಕಗಳು. ಇವುಗಳಲ್ಲಿ ವಿದ್ಯುತ್ ಹರಿಯುತ್ತದೆ. ಆದರೆ ಈ ದೇಹಗಳಿಗೆ ವಿದ್ಯುತ್ ಹರಿಯಲು ದೇಹದ ಒಂದು ಭಾಗದಿಂದ ಹರಿಯುವ ವಿದ್ಯುತ್ ಇನ್ನೊಂದು ಭಾಗ ತಲುಪಲು ವೋಲ್ಟೇಜ್ ವ್ಯತ್ಯಾಸ ಇರಬೇಕು. ನಾವು ಕೇಳುವ ಅಥವಾ ನೋಡಿರುವ ವಿದ್ಯುತ್ ಅವಘಡಗಳಿಂದ ವ್ಯಕ್ತಿಗಳು, ಪ್ರಾಣಿ ಪಶು ಪಕ್ಷಿಗಳು ಪ್ರಾಣ ಕಳೆದುಕೊಳ್ಳಲು ಕಾರಣವೇನೆಂದರೆ, ಆಗ ದೇಹದ ಒಂದು ಭಾಗ ವಿದ್ಯುತ್ ತಂತಿಗೆ ತಾಕಿದ್ದರೆ ಇನ್ನೊಂದು ಭಾಗ ಭೂಮಿಗೆ ಸ್ಪರ್ಶವಾಗಿರುತ್ತದೆ. (ಭೂಮಿ ವೋಲ್ಟೇಜ್ ಅನ್ನು ಶೂನ್ಯ ಎಂದು ಪರಿಗಣಿಸಲಾಗಿದೆ). ಆಗ ದೇಹದ ಮೂಲಕ ವಿದ್ಯುತ್ ಹರಿಯುತ್ತದೆ. ತಂತಿಯ ವೋಲ್ಟೇಜ್ ಹೆಚ್ಚು ಇದ್ದಷ್ಟು ಅಪಘಾತ ತೀವ್ರತೆ ಹೆಚ್ಚಾಗಿರುತ್ತದೆ. ಹಾಗೆಯೇ ಪ್ರಾಣಿ, ಪಕ್ಷಿಗಳ,ಹಾಗು ಮನುಷ್ಯರ ದೇಹದ ಒಂದು ಭಾಗ ಒಂದು ವಿದ್ಯುತ್ ತಂತಿಗೆ (ಒಂದು ನಿರ್ದಿಷ್ಟ ವೋಲ್ಟೇಜ್) ಮತ್ತು ಇನ್ನೊಂದು ಭಾಗ ಇನ್ನೊಂದು ವಿದ್ಯುತ್ ತಂತಿಗೆ (ಇನ್ನೊಂದು ನಿರ್ದಿಷ್ಟ ವೋಲ್ಟೇಜ್) ಸ್ಪರ್ಶವಾಗಿರಲು ತಂತಿಗಳ ವೋಲ್ಟೇಜ್ ವ್ಯತ್ಯಾಸದ ಅನ್ವಯ ದೇಹದಲ್ಲಿ ವಿದ್ಯುತ್ ಹರಿಯುತ್ತದೆ.

ಇಲ್ಲೊಂದು ಸಹಜ ಪ್ರಶ್ನೆ ನಮ್ಮಲ್ಲಿ ಮೂಡಬಹುದು. ಅದೇನೆಂದರೆ ಪಕ್ಷಿಗಳಂತೆ ನಾವು ಮನುಷ್ಯರು ಒಂದೇ ವಿದ್ಯುತ್ ತಂತಿಯ ಮೇಲೆ ಕುಳಿತರೆ ನಮಗೂ ವಿದ್ಯುತ್ ಸ್ಪರ್ಶ ವಾಗುವುದಿಲ್ಲವೇ!!?. ಖಂಡಿತ ಆಗುವುದಿಲ್ಲ.ಆದರೆ, ನಮ್ಮ ದೇಹ ಇನ್ನಾವುದೇ ಬೇರೆ ವಿದ್ಯುತ್ ತಂತಿಗೆ ತಾಕಿರಬಾರದು ಮತ್ತು ಭೂಮಿಗೂ ಸ್ಪರ್ಶವಾಗಿರಬಾರದು.(ಇಲ್ಲಿ ಭೂಮಿ ಎಂದರೆ ನೆಲವೇ ಆಗಿರಬೇಕಿಲ್ಲ. ನಾವು ಕಾಲಿಡುವ, ನಡೆದಾಡುವ ಪ್ರತಿ ಜಾಗವು ಭೂ ಸ್ಪರ್ಶವೇ ಆಗಿರುತ್ತದೆ. ಉದಾ : ತಾರಸಿ, ಮಾಳಿಗೆಯಂತ ಸ್ಥಳಗಳಲ್ಲಿ ನಿಂತಿರಲು, ನಡೆದಾಡುತಿರಲು, ನಮ್ಮ ದೇಹ ಭೂಮಿಗೆ ಸ್ಪರ್ಶ ವಾದಂತೆ.) ಆದರೆ ಇದನ್ನು ಓದುತ್ತಿರುವ ಎಲ್ಲರಲ್ಲೂ ಒಂದು ಮನವಿ. ದಯವಿಟ್ಟು ಯಾರೂ ಕೂಡ ಪಕ್ಷಿಗಳಂತೆ ವಿದ್ಯುತ್ ತಂತಿಯ ಜೊತೆಗೆ ಪ್ರಯೋಗ ಮಾಡಬೇಡಿ..

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ.
ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.**

# ನೊಂದ ಹೆಣ್ಣಿನ ಮನದಳಲು ನೀವಾದರೂ ತುಸು ಕೇಳಿ...

ನಾನು ಓರ್ವ ಪದವೀಧರೆಯಾದ ಹೆಣ್ಣು ಮಗಳು. ಪುಟ್ಟ ಹಳ್ಳಿಯೊಂದರಲ್ಲಿ ಹುಟ್ಟಿ ಬೆಳೆದ ನಾನು ಈತನನ್ನು ಮದುವೆಯಾಗಿ ಈ ಮಹಾನಗರದಲ್ಲಿ ನೆಲೆಸಿರುವೆ. ಮೇಲ್ನೋಟಕ್ಕೆ ದೊಡ್ಡ ಕಂಪನಿಯಲ್ಲಿ ಕೆಲಸ ಮಾಡುವ ಗಂಡ, ವಿಶಾಲವಾದ ಸ್ವಂತ ಮನೆ, ಆರುತಿಗೊಂದು ಕೀರುತಿಗೊಂದು ಎಂಬಂತೆ ಮುದ್ದಾದ ಎರಡು ಮಕ್ಕಳು, ಓಡಾಡಲು ಕಾರು ಎಲ್ಲವೂ ಇರುವ ನಾನು ಅದೃಷ್ಟವಂತೆ ಎಂದು ಯಾರಾದರೂ ಅಂದುಕೊಂಡರೆ ಅದು ಅವರ ತಪ್ಪಲ್ಲ ಬಿಡಿ.

ನನ್ನ ಮನದಳಲನ್ನು ಅರಿತವರು ಯಾರೂ ಇಲ್ಲ... ನೀವಾದರೂ ತುಸು ಕೇಳಿ.

ಈತನನ್ನು ಮದುವೆಯಾದ ಮೇಲೆ ನನಗೆ ಗೊತ್ತಾದದ್ದು ಈತ ಓರ್ವ ಬೆಳೆದ ಮಗು ಎಂದು. ಸೋಮವಾರದಿಂದ ಶುಕ್ರವಾರದವರೆಗೆ ತನ್ನ ಆಫೀಸಿನ ಕೆಲಸಗಳನ್ನು ಮಾಡುವ ಈತ ಶನಿವಾರ ಮತ್ತು ರವಿವಾರ ದಿನ ಕೂಡ ತನ್ನ ಲ್ಯಾಪ್ಟಾಪ್ ಮುಂದೆ ಕುಳಿತು ಕುಟ್ಟುತ್ತಾನೆ, ಚಲನಚಿತ್ರಗಳನ್ನು, ವಿಡಿಯೋಗಳನ್ನು ನೋಡುತ್ತಾನೆ, ಹಾಡುಗಳನ್ನು ಡೌನ್ಲೋಡ್ ಮಾಡುತ್ತಾನೆ,ಸ್ನೇಹಿತರೊಂದಿಗೆ ಹರಟೆ ಹೊಡೆಯುತ್ತಾನೆ. ಆತನಿಗೆ ಕಾಲ ಕಾಲಕ್ಕೆ ಊಟ, ತಿಂಡಿ, ಚಹಾ, ಕಾಫಿ, ನೀರು ಸರಬರಾಜು ಮಾಡಿದರೆ ಸಾಕು.. ಆತ ಹರಡಿದ ಎಲ್ಲವನ್ನು ಎತ್ತಿಡುವ ಜವಾಬ್ದಾರಿ ನನ್ನದು... ಆಕಸ್ಮಾತ್ ಅದರಲ್ಲೇನಾದರೂ ಏರುಪೇರಾದರೆ ಕೆಟ್ಟ ಬೈಗುಳ, ಅಶ್ಲೀಲ ಮಾತುಗಳು ಖಂಡಿತವಾಗಿಯೂ ಆತನ ಬಾಯಿಂದ ಉದುರುತ್ತವೆ.

ಇಂಥವರು ಪ್ರೀತಿ, ಪ್ರೇಮ ಮತ್ತು ಸಾಂಗತ್ಯಕ್ಕಾಗಿ ಮದುವೆ ಯಾಗುವುದಿಲ್ಲ. ಇವರಿಗೊಬ್ಬ ಅಡುಗೆ, ಮನೆ ಕೆಲಸ ಮಾಡುವಾಕೆ, ತಮ್ಮೆಲ್ಲ ಅಗತ್ಯತೆಗಳನ್ನು ತೀರಿಸುವಾಕೆ, ತನ್ನ ಮಕ್ಕಳ ಪಾಲನೆ ಪೋಷಣೆ ಮಾಡುತ್ತಾ ಅವರ ಓದು, ಆರೋಗ್ಯ, ಆಹಾರ ಮತ್ತಿತರ ಕೆಲಸ ಕಾರ್ಯಗಳನ್ನು ನಿರ್ವಹಿಸುವಾಕೆ, ತನ್ನ ಅನುಪಸ್ಥಿತಿಯಲ್ಲಿ ಮನೆಯ ಎಲ್ಲಾ ಸದಸ್ಯರ ಬೇಕು ಬೇಡಗಳನ್ನು ನೋಡಿಕೊಳ್ಳುವಾಕೆ ಬೇಕೇ ಹೊರತು ಸಂಗಾತಿಯಲ್ಲ. ಈತ ನನ್ನನ್ನು ಕಂಟ್ರೋಲ್ ಮಾಡಬಯಸುತ್ತಾನೆಯೇ ಹೊರತು ಪ್ರೀತಿಯಿಂದ ನಡೆಸಿ ಕೊಳ್ಳಲೊಲ್ಲ.

ಈತನ ಸಣ್ಣತನ ಇಲ್ಲಿಗೆ ಮುಗಿಯುವುದಿಲ್ಲ ಮನೆಯ ಸಮಸ್ತ ಜವಾಬ್ದಾರಿಯನ್ನು ನನ್ನ ಮೇಲೆ ಹೊರಿಸಿ ತಾನು ಮಾತ್ರ ಸ್ನೇಹಿತರ ಜೊತೆ ಪಾರ್ಟಿ, ಟ್ರಿಪ್ ಎಂದು ಹೊರಟುಬಿಡುತ್ತಾನೆ. ಪ್ರೀತಿಯ ಮಾತನಾಡುವ, ನನ್ನನ್ನು ಸಮಾನವಾಗಿ ಕಾಣುವ, ನನ್ನನ್ನು ಓರ್ವ ಮನುಷ್ಯರಂತೆ ಕಾಣುವ ವ್ಯಕ್ತಿ ಇವನಾಗಲಾರ. ಆದರೂ ತನ್ನ ಅವಶ್ಯಕತೆಗಾಗಿ ನನ್ನನ್ನು ಗುಲಾಮಳನ್ನಾಗಿಸಿಕೊಳ್ಳಬಲ್ಲ.

ಈತನಿಗೆ ಬಿಪಿ, ಶುಗರ್, ಕೊಲೆಸ್ಟ್ರಾಲ್, ಅಸಿಡಿಟಿ, ಮಲಬದ್ಧತೆ ಎಲ್ಲವೂ ಇದೆ. ಸಮಯಕ್ಕೆ ಸರಿಯಾಗಿ ಔಷಧಿ ಮಾತ್ರೆಯನ್ನು ತೆಗೆದುಕೊಳ್ಳಲೇಬೇಕು. ಊಟದಲ್ಲಿ ಬಹಳಷ್ಟು ನಿಯಮಗಳಿವೆ ಈತನದ್ದು. ಮುಂಜಾನೆ ಮತ್ತು ರಾತ್ರಿ ಬಿಸಿ ಬಿಸಿಯಾದ ಅಡುಗೆಯೇ ಬೇಕು. ಮುಂಜಾನೆಯ ತಿಂಡಿಯ ಜೊತೆಗೆ ಮಧ್ಯಾಹ್ನದ ಊಟವನ್ನು ಬಿಸಿಯಾಗಿ ಮಾಡಿ ಹಾಟ್ ಬಾಕ್ಸ್ ನಲ್ಲಿ ಹಾಕಿ ಕೈಯಲ್ಲಿ ಕೊಟ್ಟರೆ ಶಿಳ್ಳೆ ಹೊಡೆಯುತ್ತಾ ಒಯ್ಯುತ್ತಾನೆ ಈತ.. ಬೆಳಗಿನ ಸಮಯದಲ್ಲಿ ಶ್ರಮವಹಿಸಿ ಅಷ್ಟೆಲ್ಲವನ್ನು ಮಾಡಿಕೊಟ್ಟ ನನ್ನೆಡೆ ಒಂದು ಕಿರು ನೋಟವನ್ನು ಕೂಡ ಹರಿಸುವುದಿಲ್ಲ ಆತ. ಒಮ್ಮೆ ಮಾಡಿದ ಅಡುಗೆಯನ್ನು ಮತ್ತೆ ಕೆಲ ದಿನಗಳವರೆಗೆ ಎಂದಿಗೂ ಪುನರಾವರ್ತಿಸಬಾರದು, ರುಚಿಯಲ್ಲೂ ಕೂಡ ಬಹಳ ಪರ್ಟಿಕ್ಯುಲರ್. ಹೋಟೆಲಿನ ರುಚಿಯನ್ನೇ ಮನೆಯಲ್ಲೂ ಬಯಸುವ ಈತ ಹೋಟೆಲ್ನಲ್ಲಿ ತುಸು ಎಡವಟ್ಟಾದರೆ ಸುಮ್ಮನೆ ತಿಂದು ಬಿಲ್ ಕೊಟ್ಟು ಬರುತ್ತಾನೆ... ಆದರೆ ಮನೆಯಲ್ಲಿ ಎಡವಟ್ಟಾದರೆ



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper



ದೂರ್ವಾಸನ ಅಪರಾವತಾರವೇ ಸರಿ.

ಮದುವೆಯಾಗಿ 20 ವರ್ಷಗಳಾದರೂ ಅಡುಗೆ ಮಾಡುವುದನ್ನು ಹೀಗೆಯೇ ಮಾಡಬೇಕು ಎಂದು ಹೇಳಿಕೊಡುವಷ್ಟು ನಿಷ್ಣಾತನೀತ... ಆದರೆ ತಪ್ಪಿಯೂ ಉಂಡ ತಟ್ಟೆಯನ್ನು ಎತ್ತಿ ಸಿಂಕ್ ನಲ್ಲಿ ಹಾಕಲಾರದವನು. ತುಸು ಉಪ್ಪು ಜಾಸ್ತಿಯಾದರೆ ತಟ್ಟೆಯನ್ನು ಎತ್ತಿ ಎಸೆದುಬಿಡುತ್ತಾನೆ.

ಹೆಂಡತಿಯಾಗಿ ನನ್ನ ಕರ್ತವ್ಯಗಳನ್ನು ತಿಳಿ ಹೇಳುವ ಈತ ಗಂಡನಾಗಿ ದುಡಿದು ತಂದು ಹಾಕುವುದನ್ನು ಬಿಟ್ಟರೆ ಉಳಿದ ತನ್ನಾವುದೇ ಕರ್ತವ್ಯಗಳನ್ನು ಅರಿತಿಲ್ಲ. ದಾಂಪತ್ಯ ಎಂದರೆ ಕೇವಲ ದೈಹಿಕ ಸಾಂಗತ್ಯವಲ್ಲ, ಮಾನಸಿಕವಾಗಿಯೂ ಒಬ್ಬರನ್ನೊಬ್ಬರು ಅರಿತುಕೊಂಡು ಪ್ರೀತಿ, ಪ್ರೇಮ ಸಹಬಾಳ್ವೆ, ವಿಶ್ವಾಸ ಮತ್ತು ನಂಬಿಕೆಯಿಂದ ಜೊತೆಯಾಗಿ ಬದುಕಬೇಕು ಎಂಬುದು ಈತನಿಗೆ ಗೊತ್ತೇ ಇಲ್ಲ. ಇಡೀ ರಾತ್ರಿ ಬೆನ್ನು ತೋರಿಸಿ ಮಲಗುವ ಈತ ಜೋರಾಗಿ ಗೊರಕೆ ಹೊಡೆಯುತ್ತಾನೆ. ಮತ್ತೆ ಮುಂಜಾನೆ ಏಳುತ್ತಲೇ ಫೋನ್ ಹಿಡಿದವ ರಾತ್ರಿ ಮಲಗುವವರೆಗೂ, ಈತ ಹಿಡಿದಿರುವ ಮೊಬೈಲಿಗೆ ದಣಿವಾಗಿ ಹಾಸಿಗೆಯ ಮೇಲೆ ಬೀಳುವವರೆಗೂ ಆತ ಫೋನಿನಲ್ಲೇ ಮುಳುಗಿರುತ್ತಾನೆ. ಮನೆಯ ಎಲ್ಲ ವಸ್ತುಗಳು ಇದ್ದಲ್ಲಿಯೇ ಇರಬೇಕು ಓರಣವಾಗಿರಬೇಕು ಮನೆ ಯಾವಾಗಲೂ ಸ್ವಚ್ಛ ಸುಂದರ ಮತ್ತು ಥಳ ಥಳಿಸುವಂತಿರಬೇಕು ಎಂದು ಹೇಳುವ ಈತ ಒಂದು ಕಡ್ಡಿಯನ್ನು ಎತ್ತಿ ಅಲ್ಲಿಂದಿಲ್ಲಿಗೆ ಇಡುವ ಕಷ್ಟವನ್ನು ತೆಗೆದುಕೊಳ್ಳುವುದಿಲ್ಲ.

ನನ್ನ ತವರಿನ ಕೌಟುಂಬಿಕ ಕಾರ್ಯಕ್ರಮಗಳಿಗೆ ಎಂದೂ ಹಾಜರಾಗದ ಈತ... ನಾನು ಮಕ್ಕಳೊಂದಿಗೆ ಹೊರಡುವಾಗ ಸ್ವಲ್ಪವೇ ಹಣ ಕೊಟ್ಟು ಕೈ ತೊಳೆದುಕೊಂಡುಬಿಡುತ್ತಾನೆ. ಆತನ ಜುಗ್ಗತನಕ್ಕೆ ಹಣೆ ಚಚ್ಚಿಕೊಳ್ಳುವುದನ್ನು ಬಿಟ್ಟರೆ ಮತ್ತೇನು ಮಾಡಲು ನನ್ನಿಂದ ಸಾಧ್ಯವಿಲ್ಲ. ನನ್ನ ಅಸಹಾಯಕತೆಯನ್ನು ನನ್ನ ತವರವರೂ ಬಲ್ಲರು ಆದರೆ, ಏನೂ ಮಾಡಲು ಸಾಧ್ಯವಾಗದ ಪರಿಸ್ಥಿತಿ ಅವರದು.

ದಿನಗಳು ವಾರಗಳಾಗಿ, ವಾರಗಳು ತಿಂಗಳುಗಳಾಗಿ, ತಿಂಗಳುಗಳು ವರ್ಷಗಳಾಗಿ ಸಾಗಿದಂತೆ ನಾನು ನನ್ನ ಈ ಹಿಂದಿನ ಬದುಕಿನ ನೆರಳಾಗುವೆ, ನನ್ನ ಅಸ್ತಿತ್ವವೇ ನಿಧಾನವಾಗಿ ಅಳಿಸುತ್ತಾ ಹೋಗಿ ಕೊನೆಗೊಮ್ಮೆ ಇಲ್ಲದಂತಾಗಿ ಉಸಿರುಗಟ್ಟಿದಂತಾದರೂ ನಿಷ್ಕ್ರಿಯತೆ ನನ್ನನ್ನು ಕಟ್ಟಿ ಹಾಕುತ್ತಿದೆ..

ನನ್ನ ಆಸೆ ಆಕಾಂಕ್ಷೆಗಳನ್ನು, ಸ್ನೇಹಿತರನ್ನು, ಆಸಕ್ತಿಗಳನ್ನು ಕೌಟುಂಬಿಕ ಹಿತಾಸಕ್ತಿಯ ನೆಪವೊಡ್ಡಿ ತ್ಯಾಗ ಮಾಡಲು ಒತ್ತಾಯಿಸಿದ ಈತ ತಾನು ಮಾತ್ರ ಎಳ್ಳಷ್ಟು ಜವಾಬ್ದಾರಿಗಳನ್ನು ಹೊರಲಾರ. ನನ್ನಲ್ಲಿರುವ ಭಾವನಾತ್ಮಕ ಕೆಲಸಗಾರ್ತಿ ಉಸಿರುಗಟ್ಟುತ್ತ ಭಾವನೆಗಳೇ ಒಣಗಿ ಹೋಗಿರುವ ಬರಡು ಮರದಂತೆ ಗುಟುಕು ಪ್ರೀತಿಗಾಗಿ ಜವಾಬ್ದಾರಿಯ ಭಾರ ಹೊತ್ತು ನರಳುತ್ತಾಳೆ.

ಸೋದರಿಯರೇ ನೆನಪಿಟ್ಟುಕೊಳ್ಳಿ... ಬದುಕಿನ ಇಂತಹ ಹೋರಾಟಗಳಲ್ಲಿ ನಾನೊಬ್ಬಳೇ ಇಲ್ಲ ನನ್ನಂತಹ ಸಾವಿರಾರು ಲಕ್ಷಾಂತರ ಹೆಣ್ಣು ಮಕ್ಕಳು ಇದ್ದಾರೆ. ಪ್ರೀತಿರಾಹಿತ್ಯ, ಕೃತಜ್ಞತೆ ಇಲ್ಲದ ಪುರುಷ ಪ್ರಧಾನ ವ್ಯವಸ್ಥೆಯ ಅಡಿ ನರಳುತ್ತಿದ್ದಾರೆ.

ಈ ರೀತಿಯ ಬದುಕು ಬದುಕಲ್ಲ.... ಓರ್ವ ಪ್ರೀತಿಸುವ ಒಳ್ಳೆಯ ಸಾಂಗತ್ಯವನ್ನು ನೀಡುವ, ನನ್ನನ್ನು ಗೌರವಿಸುವ ಮತ್ತು ಬೆಂಬಲಿಸುವ ಪತಿಯನ್ನು ಪಡೆಯುವ ಅರ್ಹತೆ ನನಗಿದೆ. ನಾನು ಹುಟ್ಟುವಾಗ ಒಬ್ಬಳೇ, ಸಾಯುವಾಗಲು ಒಬ್ಬಳೇ, ಬೇರೊಬ್ಬರ ಬದುಕನ್ನು ನಾನು ಬದುಕಬಾರದು ಎಂಬ ಚಿಂತನೆ ಹಲವಾರು ಬಾರಿ ಮನದಲ್ಲಿ ಹಾಯ್ದು ಹೋಗಿದೆ. ನನ್ನ ಬದುಕಿನಲ್ಲಿ ಬರುವ ಎಲ್ಲರೊಂದಿಗೆ ಸಹಾಯ ಸಹಕಾರಗಳನ್ನು ನೀಡುತ್ತಾ ಅವರೊಂದಿಗೆ ನನ್ನ ಬದುಕನ್ನು ರೂಪಿಸಿಕೊಳ್ಳುವ ಹಕ್ಕು ಮತ್ತು ಕರ್ತವ್ಯ ನನ್ನದು ಮಾತ್ರ ಎಂಬ ಅರಿವಿದ್ದು ನಾನು ಈ ವಿವಶಳಾಗಿರಲು ಕಾರಣ ನನಗೆ ಆರ್ಥಿಕ ಸ್ವಾತಂತ್ರ್ಯ ಇಲ್ಲದಿರುವುದೇ? ಸಾಮಾಜಿಕ ಸ್ಥಾನಮಾನ ದೊರೆಯುವುದಿಲ್ಲ ಎಂಬ ಭಯವೇ? ಅಥವಾ ಸಂಸಾರ ಎಂಬ ಈ ವ್ಯವಸ್ಥೆಯಿಂದ ಬಿಡಿಸಿಕೊಳ್ಳಲಾಗದಿರುವ ಅಶಕ್ತತೆಯೇ? ನೀವೇ ಹೇಳಿ.

# ಗಾಜಿನ ಕಪಾಟಿನಲ್ಲಿ ಭದ್ರವಾಗಿದ್ದಾಳೆ ನಮ್ಮಮ್ಮ

■ ರಮೇಶ ಶಂ ಮಂಟೂರ
ಮುಳವಾಡ, ವಿಜಯಪುರ

ನಿಜ ಕಣ್ರೀ, ಗಾಜಿನ ಕಪಾಟಿನಲ್ಲಿ ಭದ್ರವಾಗಿದ್ದಾಳೆ ನಮ್ಮಮ್ಮ. ಅರೆ, ಏನ್ ಹೇಳ್ತಾ ಇದ್ದಾನಪ್ಪಾ ಇವನು? ಅವ್ವನನ್ನು ಗಾಜಿನ ಕಪಾಟಿನಲ್ಲಿ ಇಟ್ಟಿರುವ ಇವನೊಬ್ಬ ಹುಚ್ಚನೇ ಸರಿ, ಎನ್ನುತ್ತಿರಬೇಕಲ್ಲವೇ?

ನಿಮಗೊಂದು ಹಾಡು ನೆನಪಿದೆಯೆ? "ತಾಯಿ ಶಾರದೆ ಲೋಕ ಪೂಜಿತೆ ಜ್ಞಾನದಾತೆ ನಮೋಸ್ತುತೆ "ಈ ಹಾಡಿನಲ್ಲಿ ತಾಯಿ ಅಂದರೆ ಸರಸ್ವತಿ. ತಾಯಿಗೆ ಅಮ್ಮ ಎಂದೂ ಕರೆಯುತ್ತೇವೆ. ಅಂದರೆ ಗಾಜಿನ ಕಪಾಟಿನಲ್ಲಿ ಭದ್ರವಾಗಿರುವ ನಮ್ಮ ನಿಮ್ಮೆಲ್ಲರ ಅಮ್ಮ ಅವಳೇ 'ಪುಸ್ತಕ ಅಮ್ಮ'

ಹೌದು, ಬಹುತೇಕ ಜನರು ಓದಬೇಕೆಂದು ಪುಸ್ತಕಗಳನ್ನು ಕೊಂಡು ತಂದಿರುತ್ತಾರೆ. ಇಲ್ಲವೆ ಗೆಳೆಯ /ಗೆಳತಿಯರಿಂದ, ಸಂಬಂಧಿಕರಿಂದ, ಹಿರಿ–ಕಿರಿಯರಿಂದ ತೆಗೆದುಕೊಂಡು ಬಂದಿರುತ್ತಾರೆ. ಆದರೆ ಓದುತ್ತಾರೆಯೇ? ಓದಿದರೂ ಪೂರ್ಣ ಓದಿ ಮುಗಿಸಿರುತ್ತಾರೆಯೇ? ಖಂಡಿತಾ ಇಲ್ಲ. ನಿಜ ಬಹಳಷ್ಟು ಜನರು ತಂದಿರುವ ಎಲ್ಲ ಪುಸ್ತಕಗಳನ್ನು ಪೂರ್ಣ ಓದಿ ಮುಗಿಸಿರುವುದೇ ಇಲ್ಲ. ಗಾಜಿನ ಕಪಾಟಿನಲ್ಲೋ ಟ್ರಂಕಿನಲ್ಲೋ ಅವುಗಳನ್ನು ಅಂದವಾಗಿ ಜೋಡಿಸಿರುತ್ತಾರೆ. ನೋಡುಗರಿಂದ ಪ್ರಶಂಷೆ ಗಿಟ್ಟಿಸಿಕೊಳ್ಳುವ ಚಪಲ.

ಇದು ಕೇವಲ ಸಾಮಾನ್ಯ ಜನರ ಮಾತಲ್ಲ. ಮಹಾನ್ ಎನಿಸಿಕೊಂಡಿರುವ ಅನೇಕ ಕವಿ, ಲೇಖಕರ ಕಥೆಯೂ ಇದಾಗಿದೆ. ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ, ಸಾಹಿತ್ಯ ಸಮ್ಮೇಳನಗಳಲ್ಲಿ, ಪುಸ್ತಕ ಸಂತೆಯಲ್ಲಿ, ಅದೂ ಚೆನ್ನಾಗಿದೆ, ಇದು ಚೆನ್ನಾಗಿದೆ ಎಂದುಕೊಂಡು ತಂದಿರುವ ಅದೆಷ್ಟೋ ಪುಸ್ತಕಗಳು ಇಂದು ಎಲ್ಲರ ಮನೆಯಲ್ಲಿ ಗಾಜಿನ ಕಪಾಟಿನಲ್ಲಿ ಭದ್ರವಾಗಿವೆ.ಕೆಲವೊಂದು ಮನೆಗಳಲ್ಲಂತೂ ಗೆದ್ದಲು ಹುಳುಗಳು ಆ ಪುಸ್ತಕಗಳಿಗೆ ಮುತ್ತಿಕೊಂಡಿವೆ. ಇದು ಅತಿಶಯೋಕ್ತಿ ಎನಿಸಿದರೂ ಸತ್ಯವಾಗಿದೆ.

"ಗಾಜಿನ ಕಪಾಟಿನಲ್ಲಿಡಲು ನಾನೇನು ಅಲಂಕಾರದ ವಸ್ತುವಲ್ಲ ;ಹರಿದರೂ ಚಿಂತೆಯಿಲ್ಲ ಹರಿಯಲಿ ಕೈಯಿಂದ ಕೈಗೆ "ಎಂದು ಪುಸ್ತಕಗಳೇ ಸಾರಿ ಸಾರಿ ಹೇಳುತ್ತಿವೆ. ಆದರೂ ಕೇಳುವ ಮನಸ್ಥಿತಿ ನಮ್ಮದಾಗಿಲ್ಲ. ಕೆಲವೊಮ್ಮೆ ಪುಸ್ತಕಗಳಿಗೆ ಆಶ್ಚರ್ಯವಾಗಿ "ಏನ್ ಗುರು ನೀನಿಲ್ಲಿ?"ಎಂದು ಅಣಕಿಸುವಂತೆ ಭಾಸವಾಗುತ್ತಿದೆ. ಮೊಬೈಲ್ ಹೇಳುತ್ತದೆ "ನನ್ನನ್ನು ತಲೆ ತಗ್ಗಿಸಿ ನೋಡು, ಎಂದೂ ನಿನ್ನ ತಲೆ ಎತ್ತದಂತೆ ಮಾಡುತ್ತೇನೆ "ಎಂದು. ಅದೇ ಪುಸ್ತಕ ಹೇಳುತ್ತದೆ "ನನ್ನನ್ನು ತಲೆ ತಗ್ಗಿಸಿ ಓದು, ನಿನ್ನನ್ನು ತಲೆ ಎತ್ತುವಂತೆ ಬೆಳೆಸುತ್ತೇನೆ "ಎಂದು. ಆದರೂ ನಾವು ಪುಸ್ತಕದ ಮಾತನ್ನು ಕೇಳುತ್ತಿಲ್ಲ.

ಇದಕ್ಕೆ ಕಾರಣ ಹತ್ತಾರಿರಬಹುದು. ಬದುಕಿನ ಒತ್ತಡ, ಸಂಸಾರದ ತಾಪತ್ರಯ, ಕೆಲಸದ ಜಂಜಾಟ, ಮೊಬೈಲ್ ಎಂಬ ಮಾಟಗಾತಿಯ



ಆಕರ್ಷಣೆ, ಹಣ ಗಳಿಸುವ ಚಪಲ, ಟಿವ್ಹಿ ಎಂಬ ಮೂರ್ಖರ ಪೆಟ್ಟಿಗೆ, ಗೆಳೆಯ ಗೆಳತಿಯರೆಂಬ ಸಮಯ ಕೊಲ್ಲುವ ವೈರಿಗಳು ಇತ್ಯಾದಿ ಇತ್ಯಾದಿ. ಇವೆಲ್ಲದರ ಮಧ್ಯೆ ಓದುವುದಾದರೂ ಎಂತು? ಎಂಬ ನಿಮ್ಮೀ ಪ್ರಶ್ನೆಗೆ ನನ್ನದೊಂದು ಚಿಕ್ಕ ಪ್ರಯತ್ನ.

ಮೊದಲು ಹಾಸಿಗೆಯಿಂದ ಇದ್ದ ತಕ್ಷಣ "ಕರಾಗ್ರೆ ವಸತೇ ಲಕ್ಷ್ಮಿ ಕರಮಧ್ಯೆ ಸರಸ್ವತಿ ಕರಮೂಲೆ ತೋ ಗೋವಿಂದಂ ಪ್ರಭಾತೆ ಕರದರ್ಶಣಂ " ಎಂಬ ಮಂತ್ರ ಹೇಳಿ ಕೈಗಳನ್ನು ನೋಡಿಕೊಳ್ಳಿ. ಹಾಸಿಗೆಯನ್ನು ಮಡಚಿಟ್ಟು ಭೂಮಿತಾಯಿಗೆ ನಮಸ್ಕರಿಸಿ. ಬಾಗಿಲು ತೆರೆದು ಸೂರ್ಯದೇವನಿಗೊಂದು ಧನ್ಯವಾದದ ನಮಸ್ಕಾರ ಮಾಡಿ. ಹಲ್ಲುಜ್ಜಿ ಮುಖ ತೊಳೆಯಿರಿ. ಮನೆಯೊಳಗೆ ಬಂದು ದೇವರಿಗೆ ನಮಸ್ಕರಿಸಿ ಒಂದು ಗ್ಲಾಸು ನೀರು ಕುಡಿಯಿರಿ. ನಂತರ 10–15 ನಿಮಿಷ ಧ್ಯಾನ, ಬೆಳಗಿನ ನಡಿಗೆ, ಸ್ವಲ್ಪ ವ್ಯಾಯಾಮ ಮಾಡಿರಿ. ಬೆಳಗಿನ ಕ್ರಿಯಾ ವಿಧಿಗಳನ್ನು ಮುಗಿಸಿ ಸ್ನಾನ ಮಾಡಿರಿ. ಪೂಜೆ ಮಾಡುವ ಹವ್ಯಾಸವಿದ್ದರೆ ಪೂಜೆ ಮಾಡಿರಿ. ಇಲ್ಲದಿದ್ದರೆ ದೇವರಿಗೊಂದು ನಮಸ್ಕಾರ ತಿಳಿಸಿ ಮನೆಗೆಲಸ ಇದ್ದರೆ ಮಾಡಿ ಮುಗಿಸಿ. ಒಂದು ಕಪ್ ಟೀ /ಕಾಫಿ /ಹಾಲು ಕುಡಿಯಿರಿ.

ನಂತರಕಪಾಟಿನಲ್ಲಿಶೋಭಯಮಾನವಾಗಿರುವ ಒಂದು ಪುಸ್ತಕ ಎತ್ತಿಕೊಳ್ಳಿ. ತಿಳಿದರೂ ಸರಿ, ತಿಳಿಯದಿದ್ದರೂ ಸರಿ ಅರ್ಧ ಗಂಟೆ ಓದಿರಿ. ಆಗ ನಿಮ್ಮ ಮನಸ್ಸಿನಲ್ಲಿ ಸಕಾರಾತ್ಮಕ ಭಾವನೆಗಳು ಮೊಳಕೆಯೊಡೆಯಲು ಪ್ರಾರಂಭಿಸುತ್ತವೆ. ಹೀಗೇ ದಿನಾಲೂ ಮಾಡುತ್ತಾ ಹೋಗಿ. ವಾರದಿಂದ ವಾರಕ್ಕೆ ಓದುವ ಸಮಯ ಹೆಚ್ಚಿಸುತ್ತಾ ಹೋಗಿ. ಬರುಬರುತ್ತಾ ಸಾಯಂಕಾಲದ ಅವಧಿಗೆ ಅರ್ಧ ಗಂಟೆ ಓದಲು ಪ್ರಾರಂಭಿಸಿ. ಅದರ ಅವಧಿಯನ್ನೂ ಹೆಚ್ಚಿಸುತ್ತಾ ಹೋಗಿ. ಕೆಲವೇ ತಿಂಗಳುಗಳಲ್ಲಿ ಕಪಾಟಿನಲ್ಲಿರುವ ಪುಸ್ತಕಗಳು ಮುಗಿದೇ ಹೋಗುತ್ತವೆ. ಕಪಾಟಿನಲ್ಲಿರುವ ಜ್ಞಾನ ನಿಮ್ಮ ಮಸ್ತಕಕ್ಕೆ ಸ್ಥಳಾಂತರವಾಗುತ್ತದೆ. ನಿಮ್ಮ ಜ್ಞಾನ ಸಾಗರ ನೂರ್ಮಡಿಯಾಗುತ್ತದೆ. ಆಗ ನಿಮ್ಮ ಮನಸ್ಸಿಗೆ ಆದ ಸಂತೋಷ ಪದಗಳಲ್ಲಿ ವರ್ಣಿಸಲಾಗದು.ಇದರಿಂದ ನನ್ನ ಬರವಣಿಗೆಗೂ ಬೆಲೆ ಸಿಕ್ಕಂತಾಗುತ್ತದೆ. ಏನಂತೀರಿ...?

## ಕವಿ ಮನಸು

### ಚಂದಿರನ ಊರಲ್ಲಿ

ಚಂದಿರನ ಊರಲ್ಲಿ
ಬೆಳದಿಂಗಳ ಹಾಲ್ನೊರೆಯಲಿ
ನಕ್ಷತ್ರಗಳ ದಿಟ್ಟಿಸುತಲಿ
ಸಂತಸ ತುಂಬಿದೆ ಮನದಲಿ

ತಾರೆಗಳ ಸಂಗಮದಲ್ಲಿ
ಮೋಡದ ಮರೆಯಲಿ
ಚಂದಿರನ ಹುಡುಕುತಲಿ
ದಣಿದಿಹೆನು ಬಾನಂಗಳದಲ್ಲಿ

ಬೆಳ್ಳನೆ ಬೆಳಕಿನಲ್ಲಿ
ಅರೆ ಕ್ಷಣದಲ್ಲಿ
ಬಂದನು ಚಂದಿರನು
ಚೆಲುವನು ಸೂಸಿದನು

ಮೋಡಿಯ ಮಾಡುತ
ಬಾನನು ಬೆಳಗುತ
ಮುಗುಳ್ನಗೆಯ ಚೆಲ್ಲಿದನು
ತನ್ನೂರಿಗೆ ನನ್ನನ್ನು ಸ್ವಾಗತಿಸಿದನು

– ಚೇತನ ಭಾರ್ಗವ, ಬೆಂಗಳೂರು

### ಹೀಗಿರಲಿ ಒಂದು ದಿನ

ಎಲ್ಲಾ ನೋವುಗಳ ಮರೆಸುವ ಹಾಗೆ
ಪ್ರೀತಿಯನ್ನಷ್ಟೇ ಹಂಚುವ ಹಾಗೆ

ಮನದಾಳದ ಬೇಗೆ ನೀಗುವ ಹಾಗೆ
ಇತರರಿಗೂ ದಾರಿದೀಪವಾಗುವ ಹಾಗೆ

ಹೀಗಿರಲಿ ಒಂದು ದಿನ
ಸ್ವಂತಿಕೆ ರಾರಾಜಿಸುವ ಹಾಗೆ
ಹಗೆತನ ದೂರಾಗುವ ಹಾಗೆ

ವೈಷಮ್ಯದ ಪರದೆ ಸರಿಸುವ ಹಾಗೆ
ಪ್ರತಿ ಕೃತಿಯಲು ಪ್ರೀತಿ ಹಂಚುವ ಹಾಗೆ

ದ್ವೇಷಕ್ಕೆ ತಣ್ಣೀರೆರಚುವ ಹಾಗೆ
ಸಂಭ್ರಮದ ದೀಪ ಬೆಳಗುವ ಹಾಗೆ

ಹೀಗಿರಬೇಕು ಒಂದು ದಿನ
ಎಲ್ಲರೂ ನಮ್ಮವರೇ ಎನ್ನುವ ಹಾಗೆ
ಎಲ್ಲರೊಳು ಒಂದಾಗಿ ಬಾಳುವ ಹಾಗೆ

ಇತರರ ನೋವನು ತಬ್ಬುವ ಹಾಗೆ
ಸ್ವಾಭಿಮಾನದ ಕಟ್ಟೆಯೊಡೆದು
ಪ್ರೀತಿ ಮೊಳಕೆಯೊಡೆಯುವ ಹಾಗೆ

ಉಸಿರು ಕೊನೆಯಾಗುವುದರೊಳಗೆ
ನಿಸ್ವಾರ್ಥತೆಯ ಕಿರಣ ಚಿಮ್ಮವ ಹಾಗೆ
ಹಿತಶತ್ರುಗಳಿಗೂ ಹಿತೈಷಿಯಾಗುವ ಹಾಗೆ

ಇರಲಿ ಹೀಗೊಂದು ದಿನ
ನನಗಾಗಿ ಅಲ್ಲದಿದ್ದರೂ ನನ್ನವರಿಗಾಗಿ
ಬದುಕುವ ಹಾಗೆ
ಕಮಲದ ಎಲೆಯ ಮೇಲೆ ನೀರು
ಇದ್ದಹಾಗೆ

ಇರಲಿ ಹೀಗೊಂದು ದಿನ
ಚಿಂತೆ ಎಂಬ ಚಿತೆ ಸುಡದಹಾಗೆ
ನಿಷ್ಕಲ್ಮಶಪ್ರೇಮ ಕಾರಂಜಿ ಚಿಮ್ಮವಹಾಗೆ

ಗೆದ್ದು ಬಿಡುವ ಒಂದುದಿನ
ಎಲ್ಲರ ಮನದಲ್ಲೂ ನಾ
ಚಿರಸ್ಥಾಯಿಯಾಗಿ ಉಳಿಯುವ ಹಾಗೆ
ಹೆಸರು ಸದಾ ಅಜರಾಮರ ಆಗುವಹಾಗೆ

ಇದ್ದುಬಿಡುವ ಏನು ಇಲ್ಲದ ಹಾಗೆ
ಗೆದ್ದುಬಿಡುವ ಎಲ್ಲವೂ
ಕಾಲಡಿಯಲ್ಲೇ ಬಿದ್ದಿರುವಹಾಗೆ

– ಸಿಂಧುಗುಬ್ಬಿ ಸಹಶಿಕ್ಷಕಿ
ಹೇರೂರು. ಗುಬ್ಬಿ ತಾಲ್ಲೂಕು

### ಹೊಸ ಬೆಳಕು ಮೂಡಿದಾಗ

ಬದುಕು ಸಿಹಿಕಹಿಗಳ ಸಮ್ಮಿಶ್ರಣದ ಉದಕ
ಏರಿಳಿತಗಳ ಎದುರಿಸಿ ಗೆಲ್ಲಬೇಕು ಪದಕ;
ಜೀವನದ ಕಷ್ಟಗಳ ಮೌನದಿ ದಹಿಸಬೇಕು
ಸಿಹಿಯ ಕ್ಷಣಗಳ ಮನದಿ ಕೂಡಿಡಬೇಕು..!!

ಹಸಿದ ಹೊಟ್ಟೆಯು ಕಲಿಸಿದ ಪಾಠವು
ಜರಿದ ಸಿರಿವಂತರ ಮಾತಿನ ಭಾರವು;
ಬಡತನದ ಬೇಗೆಗೆ ಬಸವಳಿದ ಹೃದಯವು
ರಟ್ಟೆಯ ಶಕ್ತಿಯೇ ಬದುಕಬೇಕೆಂಬ
ಛಲವು...!!

ಕಾಯಕದ ನಿಷ್ಠೆಗೆ ಬಡತನವೇ ಮಾಯವು
ಬೆವರಿಳಿದ ಕ್ಷಣಕ್ಷಣವು ಜೀವಕೆ
ಹೊಸತನವು;
ಅವಮಾನದ ಮಾತಿನ ಮಳೆಗೆ ಮೌನವು
ಇಂದಿನ ಸಾಧನೆಗೆ ಇವೆಲ್ಲವುಗಳೇ
ಅನ್ನವು..!!

ಕಹಿ ಮರೆತು ಸಿಹಿಯೊಡನೆ ಜೀವಿಸಬೇಕು
ಮೋಡದಂತೆ ಮಳೆಸುರಿಸಿ ಮನವು
ಹಗುರಾಗಬೇಕು;
ನಾಲ್ಕುದಿನದ ಬದುಕಲಿ ಸಿಹಿಯನ್ನು
ಸವಿಯಬೇಕು
ಕಹಿಗಳ ಮೆಟ್ಟಿಲನ್ನು ಏರುತ್ತಾ
ಸಾಗಬೇಕು...!!

– ಕಾಡಜ್ಜಿ ಮಂಜುನಾಥ

# 'ಮೊಗ್ಗು ಅರಳುವ ಸಮಯ'ದಲ್ಲಿ ಮಕ್ಕಳ ಪ್ರಗತಿಗೆ ಪಾಲಕರಿಗೆ ಕಿವಿಮಾತು

ಗೆಳೆಯ ಡಾ. ಪರಮೇಶ್ವರಯ್ಯ ಸೊಪ್ಪಿಮಠ್ ಅವರು ಬರೆದ 'ಮೊಗ್ಗು ಅರಳುವ ಸಮಯ' ಪುಸ್ತಕವು ಶಿಕ್ಷಣ ಕ್ಷೇತ್ರದ ಒಂದು ಮಾರ್ಗದರ್ಶಿ ಕೃತಿ. ತಮ್ಮ ಮಕ್ಕಳು ಇತರೆ ಮಕ್ಕಳಿಗಿಂತ ವಿಶಿಷ್ಟವಾಗಿರಬೇಕು, ಉನ್ನತ ಹಂತಕ್ಕೆ ಬೆಳೆಯಬೇಕು ಎನ್ನುವ ಕನಸು ಮತ್ತು ಹಂಬಲ ಪ್ರತಿಯೊಬ್ಬ ಪಾಲಕರಿಗೂ ಇರುತ್ತದೆ. ಬೆಳೆಯುವ ಪೈರನ್ನು ಮೊಳಕೆಯಲ್ಲೇ ಕಾಣು ಎಂಬಂತೆ ಎಳವೆಯಲ್ಲಿ ಮಕ್ಕಳನ್ನು ಹೇಗೆ ಬೆಳೆಸಬೇಕೆಂಬ ತಾತ್ವಿಕತೆಯಾಗಲಿ, ಮಾದರಿಗಳಾಗಲೀ ಬಹುತೇಕ ಪಾಲಕರಿಗೆ ದೊರೆಯುವುದೇ ಇಲ್ಲ. ಮಕ್ಕಳನ್ನು ಬೆಳೆಸುವ ಕುರಿತು ನಾಡಿನ ಕೆಲವೇ ಕೆಲವು ಬರಹಗಾರರು, ಶಿಕ್ಷಣ ತಜ್ಞರು ಈ ಕೊರತೆಯನ್ನು ನೀಗಿಸುವ ಪ್ರಯತ್ನ ಮಾಡಿದ್ದಾರೆ. ಅದರಲ್ಲಿ ಗೆಳೆಯ ಪರಮೇಶ್ವರಯ್ಯ ಸೊಪ್ಪಿಮಠ್ ಅವರೂ ಒಬ್ಬರೂ. ಅವರು ನಮ್ಮ ನಡುವಿನ ಶಿಕ್ಷಣ ತಜ್ಞ, ಮಕ್ಕಳ ಮಾನಸಿಕ ಚಿಕಿತ್ಸಕ ಎಂದರೆ ತಪ್ಪಲ್ಲ. ಶಿಕ್ಷಣ ಕ್ಷೇತ್ರದಲ್ಲಿ 26 ವರ್ಷಗಳ ಸೇವಾವಧಿಯ ಅನುಭವುಳ್ಳ ಸೊಪ್ಪಿಮಠ್, ಶಿಕ್ಷಣ ಕ್ಷೇತ್ರಕ್ಕೆ ತಮ್ಮದೇ ಆದ ಮೌಲಿಕ ಲೇಖನಗಳನ್ನು ಕೊಡುವುದರ ಮೂಲಕ ಶಿಕ್ಷಕರು, ಪಾಲಕರು ಹಾಗೂ ಮಕ್ಕಳ ಬೋಧನೆ ಮತ್ತು ಕಲಿಕೆಗೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಮಾರ್ಗದರ್ಶನ ಮಾಡುತ್ತಿದ್ದಾರೆ.


ಆರ್.ಬಿ.ಗುರುಬಸವರಾಜ
ಶಿಕ್ಷಕರು, ಹ.ಬೊ.ಹಳ್ಳಿ

Scan For Digital Colourful
HAMPI TIMES E-paper

ಪ್ರಸ್ತುತ ಕೃತಿಯ ಹೆಸರೇ ಹೇಳುವಂತೆ 'ಮೊಗ್ಗು ಅರಳುವ ಸಮಯ'ದಲ್ಲಿ ಅಂದರೆ ಮಕ್ಕಳ ಕಲಿಕೆ ಪ್ರಾರಂಭವಾಗುವ ಸಮಯದಲ್ಲಿ ಪಾಲಕರು ಮತ್ತು ಶಿಕ್ಷಕರು ವಹಿಸಬೇಕಾದ ಮಾರ್ಗದರ್ಶಿ ಸೂತ್ರಗಳ ಬಗ್ಗೆ ಈ ಪುಸ್ತಕವು ಬೆಳಕು ಚೆಲ್ಲುತ್ತದೆ. ಇಲ್ಲಿನ ಒಂದೊಂದು ಬರಹವನ್ನು ಗಮನಿಸಿದರೆ ಪರಮೇಶ್ವರಯ್ಯ ಸೊಪ್ಪಿಮಠ ಅವರ ಉತ್ಸಾಹ, ಕುತೂಹಲ, ಅಧ್ಯಯನ ಶೀಲತೆ ಅರ್ಥವಾಗುತ್ತದೆ. ಪ್ರತಿಯೊಂದು ವಾಕ್ಯವನ್ನೂ ಅಚ್ಚುಕಟ್ಟಾಗಿ ವ್ಯವಸ್ಥಿತಿಗೊಳಿಸಿರುವ ಪರಿ ಮೆಚ್ಚುವಂತದ್ದು. ನವ ಸಾಕ್ಷರರಿಂದ ಹಿಡಿದು ಪ್ರಕಾಂಡ ಪಂಡಿತರವರೆಗೂ ಅಂದರೆ ಎಲ್ಲಾ ಹಂತದ ಓದುಗರು ಓದಲು ಅನುಕೂಲವಾಗುವಂತಹ ಶೈಲಿಯಲ್ಲಿ ವಾಕ್ಯಗಳನ್ನು ಜೋಡಿಸಿರುವುದು ಗಮನಾರ್ಹ. ಈ ಕಲೆಯು ಎಲ್ಲಾ ಲೇಖಕರಿಗೆ ಸಿದ್ಧಿಸುವುದಿಲ್ಲ. ಇದನ್ನು ಸಾಧ್ಯಂತ ಮಾಡಿಕೊಂಡ ಗೆಳೆಯ ಸೊಪ್ಪಿಮಠ ಅವರಿಗೆ ಧನ್ಯವಾದಗಳು.

ಪ್ರಸ್ತುತ ಪುಸ್ತಕದ ಶೀರ್ಷಿಕೆ 'ಮೊಗ್ಗು ಅರಳುವ ಸಮಯ' ಕೇವಲ ಅಲಂಕಾರಿಕ ಪದಗಳ ಸಮೂಹವಲ್ಲ. ಹೊತ್ತಿಗೆಯಲ್ಲಿನ ಪ್ರತಿ ಬರಹದಲ್ಲಿ ಮಕ್ಕಳ ಬಗೆಗಿನ ಪ್ರೀತಿ, ಕಾಳಜಿ ಮತ್ತು ವಹಿಸಬೇಕಿರುವ ಎಚ್ಚರವನ್ನು ಆ ಪದಗಳು ಸಮರ್ಥವಾಗಿ ಪ್ರತಿನಿಧಿಸುತ್ತಿವೆ. ಹಾಗೆಯೇ ಪ್ರತಿಯೊಂದು ಲೇಖನದ ತಲೆಬರೆಹಗಳು ಕೂಡ ಆಕರ್ಷಕವೂ, ಅರ್ಥಪೂರ್ಣವೂ ವಿಚಾರಪೂರ್ಣವೂ ಆಗಿವೆ. ಮೂಲತಃ ಇಲ್ಲಿನ ಎಲ್ಲಾ ಬರಹಗಳು 'ಹಂಪಿಟೈಮ್ಸ್'ನಲ್ಲಿ ಪ್ರಕಟವಾದ ಅಂಕಣ ಬರಹಗಳಾಗಿರುವುದರಿಂದ, ಪದಗಳ ಮಿತಿಗಳ ನಡುವೆಯೂ ಉದ್ದೇಶಿತ ಮಾಹಿತಿ, ಆಲೋಚನೆ, ಹೊಸ ನೋಟಗಳನ್ನು ಪ್ರತಿಪಾದಿಸುವ ಹೊಣೆಗಾರಿಕೆಯಿಂದ ದೂರ ಸರಿದಿಲ್ಲ ಎಂಬುದು ಗಮನಾರ್ಹ ಸಂಗತಿ.


ಡಾ.ಪರಮೇಶ್ವರಯ್ಯ ಸೊಪ್ಪಿಮಠ
ಶಿಕ್ಷಕರು, ಹಗರಿಬೊಮ್ಮನಹಳ್ಳಿ

ಇಂದು ಎಲ್ಲಾ ಕ್ಷೇತ್ರಗಳಲ್ಲೂ ಬದಲಾವಣೆಯನ್ನು ಕಾಣುತ್ತಿದ್ದೇವೆ. ಅದರಂತೆ ಶಿಕ್ಷಣ ಕ್ಷೇತ್ರದಲ್ಲೂ ಸಾಕಷ್ಟು ಬದಲಾವಣೆಗಳು ಆಗುತ್ತಿವೆ. ಈ ಬದಲಾವಣೆಗಳು ಬಹುತೇಕ ಸಂದರ್ಭಗಳಲ್ಲಿ ಪಾಲಕರನ್ನು ತಲುಪುವುದೇ ಇಲ್ಲ. ಅದೇ ಹಳೆಯ ತತ್ವ, ಸಿದ್ಧಾಂತಕ್ಕೆ ಅಂಟಿಕೊಂಡಿರುವ ಪಾಲಕರಿಗೆ ಶಿಕ್ಷಣ ಕ್ಷೇತ್ರದ ಹೊಸತನದ ಗಾಳಿಯನ್ನು ಈ ಪುಸ್ತಕದ ಮೂಲಕ ಪಸರಿಸುವ ಪ್ರಯತ್ನ ಮಾಡಿರುವುದು ಸಾರ್ಥಕ ಎನಿಸುತ್ತದೆ.

ಇಂದಿನ ಮಕ್ಕಳ ಆಶೋತ್ತರಗಳನ್ನು ಅರಿಯುವಲ್ಲಿ ಬಹುತೇಕ ಪಾಲಕರು ಸೋತಿದ್ದಾರೆ. ಹಾಗಾಗಿ ತಮ್ಮ ಮಕ್ಕಳ ಪಾಲನೆ-ಪೋಷಣೆ ಎಂಬುತು ಕಗ್ಗಂಟಾಗುತ್ತಿದೆ. ಈ ಪುಸ್ತಕವು ಅಂತಹ ಕಗ್ಗಂಟನ್ನು ಸುಲಭವಾಗಿ ಬಿಡಿಸುವ ಸಾಧನವಾಗಿ ಪಾಲಕರಿಗೆ ಶಿಕ್ಷಕರಿಗೆ ಮಾರ್ಗದರ್ಶಿಯಾಗಿದೆ. ಈಗಿನ ಕಾಲದ ಪಾಲಕರ ಆಸಕ್ತಿ ಮತ್ತು ಅಭಿರುಚಿಗೆ ತಕ್ಕಂತಹ ಲೇಖನಗಳು ಇಲ್ಲಿವೆ. ಬಹುತೇಕ ಇಲ್ಲಿನ ಎಲ್ಲಾ ಲೇಖನಗಳು ಬಿಸಿದೋಸೆಗಳಂತಿವೆ. ಅಂದರೆ ಸವಿಯಲು ಸಿದ್ಧವಾದ ಲೇಖನಗಳಿವೆ. ಮಕ್ಕಳ ಬೆಳವಣಿಗೆಯಲ್ಲಿ ಪಾಲಕರು ಅನುಸರಿಸಬೇಕಾದ ಸಿದ್ಧ ಸೂತ್ರಗಳು ಈ ಪುಸ್ತಕದಲ್ಲಿವೆ. ತಮಗೆ ಅಂದರೆ ತಮ್ಮ ಮಕ್ಕಳಿಗೆ ಯಾವ ಸಮಸ್ಯೆ ಇದೆಯೋ ಅದಕ್ಕೆ ನೇರವಾದ ಪರಿಹಾರ ಸೂತ್ರಗಳು ಈ ಪುಸ್ತಕದಲ್ಲಿವೆ. ಹಾಗಾಗಿ ಪ್ರತಿಯೊಬ್ಬ ಪಾಲಕರಿಗೆ ಈ ಪುಸ್ತಕ ಆಪ್ತವೆನಿಸುತ್ತದೆ.

ಇಲ್ಲಿನ ಲೇಖನಗಳಿಗೆ ಶಿಕ್ಷಕನ ಅನುಭವವಿದೆ, ಶಿಕ್ಷಣ ತಜ್ಞನ ಕಾಳಜಿ ಇದೆ. ಶಿಶು ಮನೋವಿಜ್ಞಾನಿಯ ಆಪ್ತ ಸಲಹೆ ಇದೆ. ಅಂದರೆ ಲೇಖಕ ಇವೆಲ್ಲ ಪಾತ್ರಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ ಕುಶಲತೆ ಈ ಪುಸ್ತಕದಲ್ಲಿದೆ. ಶಿಕ್ಷಕನೇ ಲೇಖಕನಾದಾಗ ಇಂತಹ ಎಲ್ಲಾ ಪಾತ್ರಗಳನ್ನು ನಿರ್ವಹಿಸಲು ಸಾಧ್ಯ ಎಂಬುದನ್ನು ಗೆಳೆಯ ಪರಮೇಶ್ವರಯ್ಯ ಸೊಪ್ಪಿಮಠ್ ಸಾಧಿಸಿ ತೋರಿಸಿದ್ದಾರೆ.




ಇಲ್ಲಿನ ಪ್ರತಿ ಬರಹವು ಮಕ್ಕಳ ಮನೋವಿಜ್ಞಾನದ ನೆಲೆಯಲ್ಲಿ ನಿರೂಪಿತವಾಗಿವೆ. ಮಗು ಸ್ನೇಹಿ ಚಟುವಟಿಕೆಗಳನ್ನು ಉತ್ತೇಜಿಸುತ್ತಿವೆ. ಅದರಲ್ಲೂ ಗ್ರಾಮೀಣ ಸೊಗಡಿನ ಚಟುವಟಿಕೆಗಳು ಬಹುತೇಕ ಬರಹಗಳ ಜೀವಾಳವಾಗಿವೆ. ಗ್ರಾಮೀಣ ಭಾಗದ ಮಕ್ಕಳ ಕಲಿಕೆಗೂ ಒತ್ತು ನೀಡಬೇಕೆಂಬ ಲೇಖಕರ ಆಶಯ ಮೆಚ್ಚುವಂತದ್ದು. ಇಲ್ಲಿನ ಲೇಖನಗಳು ಕೇವಲ ಚಿಕ್ಕ ಮಕ್ಕಳಿಗೆ ಮಾತ್ರವಲ್ಲ. ಕಾಲೇಜು ಹಂತದ ವಿದ್ಯಾರ್ಥಿಗಳನ್ನೂ ಸಹ ಗಮನದಲ್ಲಿಟ್ಟುಕೊಂಡು ರಚಿಸಿರುವುದನ್ನು ಕಾಣಬಹುದು. ಹಾಗಾಗಿ ಇದೊಂದು ಉತ್ತಮ ಕೃತಿ ಎಂಬುದರಲ್ಲಿ ಎರಡು ಮಾತಿಲ್ಲ. ಮಕ್ಕಳ ಶೈಕ್ಷಣಿಕ ಅಭ್ಯುದಯಕ್ಕೆ ಶ್ರಮಿಸುತ್ತಿರುವ ಪ್ರತಿಯೊಬ್ಬ ಪಾಲಕರೂ, ಶಿಕ್ಷಕರು ಓದಲೇಬೇಕಾದ ಪುಸ್ತಕ ಇದು.


# ಕೃತಕ ಬುದ್ಧಿ ಮತ್ತೆ, ತಂತ್ರಜ್ಞಾನದ ಪ್ರಯೋಗಗಳು ಭವಿಷ್ಯದಲ್ಲಿ ಒಡ್ಡಬಹುದಾದ ಅಪಾಯಗಳ ಮೇಲೆ ಬೆಳಕು ಬೀರುವ ಕಾದಂಬರಿ

## ವಾರಾಹಿ

ವಾರಾಹಿ' ಕನ್ನಡಕಾದಂಬರಿ ಲೇಖಕರಾದ ಮಿತ್ರ ಬಂಗಿ ದೊಡ್ಡ ಮಂಜುನಾಥ ಬಳ್ಳಾರಿ ಜಿಲ್ಲೆಯ ಕಂಪ್ಲಿ ತಾಲ್ಲೂಕು ಕೇಂದ್ರದಲ್ಲಿ ವಾಸವಾಗಿದ್ದಾರೆ. ಕನ್ನಡದ ದೈನಿಕವೊಂದರಲ್ಲಿ ವರದಿಗಾರರಾಗಿ ತಮ್ಮ ವೃತ್ತಿ ಬದುಕನ್ನು ನಿರ್ವಹಿಸುತ್ತಾ, ಪ್ರವೃತ್ತಿಯಲ್ಲಿ ಸಾಹಿತ್ಯ ಕೃಷಿಯಲ್ಲಿ ತೊಡಗಿದ್ದಾರೆ. ಲೇಖಕರು ಈ ಮೊದಲು ಕಂಪ್ಲಿಯ ಅವಧೂತ ಮತ್ತು ಅಧ್ಯಾತ್ಮ ಸಾಧಕ ಶ್ರೀ ವಿರುಪಣ್ಣತಾತನವರ ಜೀವನಾಧಾರಿತ ಕಾದಂಬರಿ ತೈಲವಿಲ್ಲದಜ್ಯೋತಿ, ಪ್ರೀತಿ, ಪ್ರೇಮದಜೀವನ ಆಪ್ತಭಾವಗಳನ್ನು ಮಧುರವಾಗಿ ಬೆಸೆಯುವ ಮಂಜು ಮಲ್ಲಿಗೆ, ಅರಳು ಮಲ್ಲಿಗೆ ಜೊತೆಗೆ ಕಡೆಬೆಟ್ಟ ಎನ್ನುವ ವಿಶಿಷ್ಟ ಶೈಲಿ ಮತ್ತು ವಸ್ತುವಿನ ಕಾದಂಬರಿಗಳನ್ನು ಪ್ರಕಟಿಸಿದ್ದಾರೆ.


ಕಾದಂಬರಿ ಕಳೆದ ಶತಮಾನದ ಉತ್ತರಾರ್ಧದ ಕೊನೆಯವರೆಗೆ ಕನ್ನಡ ಸಾಹಿತ್ಯದಲ್ಲಿ ಅಪಾರ ಸಂಖ್ಯೆಯ ಓದುಗರನ್ನು ಸೃಷ್ಟಿಸಿದ ಬಹುದೊಡ್ಡ ಪ್ರಕಾರ. ಇದರೊಂದಿಗೆ ಬೆಳ್ಳಿತೆರೆಯ ಪ್ರಮುಖ ನಿರ್ದೇಶಕರ ಗಮನ ಸೆಳೆದ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ, ಐತಿಹಾಸಿಕ, ಭಕ್ತಿ ಪ್ರಧಾನ ಮುಂತಾದ ಭಿನ್ನ ಸ್ವರೂಪಗಳ ಕಥಾಹಂದರಗಳನ್ನುಳ್ಳ ಪ್ರಮುಖ ಕಾದಂಬರಿಗಳು ಬಹುತೇಕ ಸಿನಿಮಾಗಳಾಗಿ ಜನತೆಯ ಮುಂದೆ ರಾರಾಜಿಸಿದ್ದು ಹೊಸ ಇತಿಹಾಸ ಸೃಷ್ಟಿಸಿತು. ನವೋದಯ, ನವ್ಯ, ನವ್ಯೋತ್ತರ ತಲೆಮಾರಿನ ಕಾದಂಬರಿಗಳ ಲೇಖಕರು ಲೇಖಕಿಯರ ಬಳಗ ಈ ಇತಿಹಾಸಕ್ಕೆ ಕಾರಣವಾಗಿದ್ದರು. ಈಗ ಹಲವು ಕಾರಣಗಳಿಂದ ಈ ಪ್ರಕಾರಕ್ಕೆ ಸ್ವಲ್ಪ ಮೋಡ ಮುಸುಕಿದಂತೆ ಭಾಸವಾಗುತ್ತದೆ,

ಆದಾಗ್ಯೂ ಅಲ್ಲೊಂದು ಇಲ್ಲೊಂದು ಕಾದಂಬರಿಗಳು ಪ್ರಕಟಗೊಳ್ಳುತ್ತಲಿರುವುದು ಸಮಾಧಾನಕರ ಸಂಗತಿ. ಈ ಬಗೆಯ ಸಮಾಧಾನದ ಜೊತೆಗೆ ಮುಂದಿನ ದಿನಮಾನಗಳಲ್ಲಿ ಕೃತಕ ಬುದ್ಧಿ ಮತ್ತು ತಂತ್ರಜ್ಞಾನದ ಬಳಕೆಗಳಿಂದ ಸಿನಿಮಾವೊಂದು ರೂಪಗೊಳ್ಳುವ ಸಾಧ್ಯತೆಗಳನ್ನು, ಸಿನಿಮಾ ತಯಾರಿಕೆಯ ಕಥಾವಸ್ತುವನ್ನು ಕಾದಂಬರಿಗೆ ಅಳವಡಿಸಿ ತೋರಿದ ಕಾರಣಗಳಿಗೆ ಲೇಖಕ ಬಂಗಿ ದೊಡ್ಡ ಮಂಜು ನಾಥರಿಗೆ ಧನ್ಯ ವಾದಗಳನ್ನು ಹೇಳಬೇಕಿದೆ. ಕಳೆದ ಶತಮಾನದಲ್ಲಿ ಕಾದಂಬರಿಗಳು ಸಿನಿಮಾಗಳಾಗಿ ತೆರೆಕಂಡಿವೆ, ಹಲವು ಲೇಖಕ-ಲೇಖಕಿಯರು ಸಿನಿಮೋದ್ದೇಶದಿಂದ ಕಾದಂಬರಿಗಳನ್ನು ಬರೆದದ್ದೂ ಇದೆ, ಆದರೆ ಇಲ್ಲಿ ಸಿನಿಮಾ ತಯಾರಿಕೆಯ ಕನಸುಗಳೇ ಕಾದಂಬರಿಯಾಗಿ ನಮ್ಮ ಕಣ್ಮುಂದೆ ಅಪರಿಚಿತ ಲೋಕವನ್ನು ಅನಾವರಣಗೊಳಿಸುತ್ತದೆ. ಮನುಷ್ಯನಲ್ಲಿನ ಸಿನಿಕತನಗಳು ಮತ್ತು ಕೃತಕ ಬುದ್ಧಿಮತ್ತೆ, ತಂತ್ರಜ್ಞಾನಗಳ ವೈಪರೀತ್ಯಗಳಲ್ಲಿ ಪ್ರಸ್ತುತ ಸಮಾಜದ ದ್ವಂದ್ವಗಳನ್ನು, ಕಾಣದಂತಾಗುತ್ತಿರುವ ಮಾನವೀಯ ಸಂಬಂಧಗಳಿಂದಾಗಿ ಆವರಿಸಬಹುದಾದ ಭವಿಷ್ಯದ ಶೂನ್ಯತೆಗಳನ್ನು ಕೃತಿಕಟ್ಟಿಕೊಡುತ್ತದೆ. ಇದರ ನಡುವೆ ನಿಷ್ಕಲ್ಮಶವಾದ ನಿಷ್ಕಾಮಗಳಿಂದ ಕೂಡಿದ 'ಪ್ರೀತಿ' ಮತ್ತದರ ಚುಂಬಕ ಶಕ್ತಿಯನ್ನು ಯಾವ ಕೃತಕ ತಂತ್ರಗಳು ತಡೆಯಲಾರವು ಎಂಬುದನ್ನು ಧೃಡ ಪಡಿಸುತ್ತದೆ.


ಡಾ. ಗಿರಿಜಾಪತಿ ಎನ್.ಎಂ.
ಮೈಸೂರು ಮೊ: 9844582238

Scan For Digital Colourful
HAMPI TIMES E-paper

'ವಾರಾಹಿ' ಭಿನ್ನ ಧ್ವನ್ಯಾರ್ಥಗಳನ್ನು ಸಂಕೇತಿಸುವ ಶೀರ್ಷಿಕೆ, ಲೇಖಕರೇ ಹೇಳಿರುವಂತೆ ವಾರಾಹಿ ಸಪ್ತಮಾತೃಕೆಗಳಲ್ಲಿ ಒಬ್ಬಳು, ಶಕ್ತಿ ಸೇನೆ ಪ್ರಾಯಶಃ ನಾವು ಇದನ್ನು ಮಹಿಳಾ ಸೇನೆ ಎಂದು ತಿಳಿಯಬಹುದು ಈ ಸೇನೆಯ ಸೇನಾಧಿಪತಿ ಈಕೆ,ಚಿದಾನಂದಾವಧೂತರದೇವಿ ಪುರಾಣದಲ್ಲಿನ ಕಥೆಯಂತೆ ಆದಿಶಕ್ತಿಯು ಶುಂಭ ನಿಶುಂಭರನ್ನು ಸಂಹರಿಸುವಲ್ಲಿ ಈಕೆ ಸಹಾಯ ಮಾಡುತ್ತಾಳೆ. ಯಶಸ್ಸನ್ನು ಕೋರಿ ತನ್ನಲ್ಲಿಗೆ ಬರುವ ಭಕ್ತರಿಗೆ ಅಭಯದಾಯಕಳಾಗಿ ವಾರಾಹಿ ಪೂಜೆಗೊಳ್ಳುವುದು ವಿಶೇಷ. ಇನ್ನೊಂದುಕಡೆ ತುಂಗಭದ್ರಾ ನದಿಗೆ ಅದರ ಉಗಮಕ್ಕೆ ಸಂಬಂಧಿಸಿದಂತೆ ವಿಷ್ಣುವಿನ ವರಾಹವತಾರದೊಂದಿಗೆ ಬೆಸೆದ ಕಥೆಯ ಪ್ರಕಾರ 'ವಾರಾಹಿ' ಎಂಬ ಹೆಸರಿದೆ. ಇಲ್ಲಿದುಷ್ಟ ಸಂಹಾರಿಕೆಯಾಗಿಕಾಣುವ 'ವಾರಾಹಿ' ಕಾದಂಬರಿಯಲ್ಲಿ ಪ್ರೀತಿ, ಪ್ರೇಮದ ವಂಚಕರಿಗೆ ಪಾಠ ಕಲಿಸುವ ನಾಯಕಿ, ಹಾಗೆಯೇ ಪ್ರೀತಿ ಎಂಬುದು ನಿರಪೇಕ್ಷವಾಗಿ ಹರಿವ ನದಿಯಂತೆ ಸದಾತನ್ನ ಪಾಡಿಗೆತಾನು ಪ್ರವಹಿಸುತ್ತಾ ಕೊನೆಗೆ ಕಡಲನ್ನು ಸೇರಿ ಸಾರ್ಥಕವನ್ನು ಕಾಣುವ ಭಾವದ ಪ್ರತೀಕವಾಗಿಯೂಇರಬೇಕೆಂಬುದನ್ನು ನಿರೂಪಿಸುವಲ್ಲಿ ಯಶಸ್ವಿಯಾಗುವ ಪಾತ್ರ, ಅದರೆ ಈ 'ವಾರಾಹಿ' ಕೃತಕಬುದ್ಧಿ ಮತ್ತೆಯ ಪ್ರತೀಕವಾದ ಪ್ರತಿಮೆ, ಮುಂದೊಂದು ದಿನ ಈ ಬಗೆಯ ಯಂತ್ರಗಳನ್ನು ಜೀವನ ಸಂಗಾತಿಗಳನ್ನಾಗಿ ಆಯ್ಕೆ ಮಾಡಿಕೊಳ್ಳುವ ಕಾಲ ಬರಹುದೆಂಬ ಪರಿಕಲ್ಪನೆಗಳಲ್ಲಿ ಕಥಾಲೋಕವನ್ನು ವಿಸ್ತರಿಸುವ 'ಗುರು' ಭವಿಷ್ಯದಲ್ಲಿ ಕೃತಕ ಬುದ್ಧಿ ಮತ್ತೆ ಮತ್ತು ತಂತ್ರಜ್ಞಾನಗಳಿಂದಾಗುವ ಸಾಂಸ್ಕೃತಿಕ ತಲ್ಲಣಗಳನ್ನು, ಪರಿಣಾಮಗಳನ್ನು ಪ್ರತಿನಿಧಿಸುವ ಕಾಲದೊಂದಿಗೆ ಶಿಷ್ಯನ ಮುಖಾಮುಖಿಯಾಗಬೇಕಾದ ಅನಿವಾರ್ಯತೆಗಳ ಬಗ್ಗೆ ಎಚ್ಚರಿಸುತ್ತಾನೆ. ಆ ಮೂಲಕ ನಮ್ಮ ಸುತ್ತಲ ಸಮಾಜದ ಭವಿತವ್ಯದಲ್ಲಿನ ಸವಾಲುಗಳು, ಅವುಗಳಿಗೆ ಅಣಿಗೊಳ್ಳಬೇಕಾದ ಅನಿವಾರ್ಯತೆಗಳ ನಡುವೆ ಮಾನವೀಯ ಸಂಬಂಧಗಳನ್ನು ಗಟ್ಟಿಗೊಳಿಸಿಕೊಳ್ಳುವ ಬಗೆಗಿನ ಎಚ್ಚರಗಳನ್ನು ಸೂಚಿಸುವಂತೆ ಕಾದಂಬರಿ ಹಂತ ಹಂತವಾಗಿ ಸಾಗುತ್ತದೆ.




ಸಿನಿಮಾ ತಯಾರಿಕೆಯ ಕ್ರೇಜಿನಿಂದ ಹೊರಡುವ ಶಾಸ್ತ್ರಿ, ಸನ್ಯಾಸಿ, (ಹಲವು ಬಗೆಯ ವೈರುಧ್ಯ ನಡವಳಿಕೆಯ ರೂಪಕ) ಪೂಜಾರಿ, ಋಷಿ ಇವರು ಕ್ರಮವಾಗಿ ನಿರ್ದೇಶಕ, ನಿರ್ಮಾಪಕ ಮತ್ತು ಇತರ ಎಲ್ಲ ತಯಾರಿಕೆಗಳನ್ನು ನಿಭಾಯಿಸುವ ಛಲ ತೊಟ್ಟವರು. ನಟನೆಯ ವಿಭಾಗದಲ್ಲಿನ ಸೂರ್ಯ, ಕೃಷ್ಣವೇಣಿ, ಹರಿಣಿ, ವಾರಾಹಿ ಇವರಿಗೆ ಮರುಳಾಗುವ ಮನಮೋಹನ ಮುಂತಾದವರ ಪಾತ್ರಗಳು ನಮ್ಮ ಮತ್ತು ನಮ್ಮ ಪೀಳಿಗೆಗಳ ನಾಳೆಗಳ ಪ್ರತೀಕಗಳೇ ಆಗಿ ತೋರುತ್ತವೆ. ಈ ವಂಚಕ ಜಾಲದ ಬಹುರೂಪಗಳು ಅಷ್ಟು ಸುಲಭವಾಗಿ ತಿಳಿಯುವ ಸಂಗತಿಗಳಲ್ಲ, ಒಮ್ಮೆ ಅವುಗಳ ತೆಕ್ಕೆಯೊಳಗೆ ಸಿಕ್ಕಲ್ಲಿ ಮುಗಿಯಿತು ಬಿಡುಗಡೆ ಎಂಬುದು ಇರದು.

ಕಾದಂಬರಿ ಆರಂಭವಾಗುವುದೇ ಸಾಮಾನ್ಯವಾಗಿ ಸಿನಿಮಾ ಲೋಕದಜನ ಸೇರುವ ಹೋಟೆಲ್ ದೃಶ್ಯದ ಮೂಲಕ, ಎರಡು ಭಾಗಗಳಲ್ಲಿ ವಿಂಗಡಣೆಗೊಂಡ ಕಾದಂಬರಿಯ ಮೊದಲ ಭಾಗದಲ್ಲಿ 10 ಉಪ ಶೀರ್ಷಿಕೆಗಳಿವೆ, ಇಲ್ಲಿ ಕಥಾಹಂದರದ ಭೂಮಿಕೆಯಿದೆ, ನಂತರದ ಭಾಗದಲ್ಲಿ ಇಡೀ ಕಾದಂಬರಿಯು 46 ಉಪಶೀರ್ಷಿಕೆಗಳಲ್ಲಿ ಮುನ್ನಡೆ ಪಡೆದುಕೊಳ್ಳುತ್ತದೆ. ತಂತ್ರಜ್ಞಾನಗಳ ಮೂಲಕ ತಾನು ಸೃಷ್ಟಿಸಿದ ಕೃತಕ ರೋಬೊಗಳಿಗೆ ತಾನೆ ಮುಂದೊಂದು ದಿನ ಅಡಿಯಾಳಾಗಿ ತನ್ನ ಅಸ್ಮಿತೆ ಮತ್ತು ಅಸ್ತಿತ್ವಗಳನ್ನು ಉಳಿಸಿಕೊಳ್ಳಲು ಹೆಣಗಾಡು ವಂತಾದೀತೆ? ಎಂಬ ಆತಂಕ ಈ ಮುನ್ನಡೆಗಳಲ್ಲಿ ಕಂಡು ಬರುತ್ತದೆ. ಇನ್ನು ಮಹಿಳೆಯರ ಸಮಸ್ಯೆಗಳು ಹೇಗೆ ಮತ್ತಷ್ಟು ಜಟಿಲವಾಗಬಲ್ಲವೆಂಬ ಜಿಜ್ಞಾಸೆಗಳು ಪಾತ್ರಗಳ ಮೂಲಕ ಓದುಗರ ಮನಸ್ಸನ್ನು ಕಲಕುತ್ತವೆ.



ಕಾದಂಬರಿಯ ಭಾಷೆಕವಿಯ ಪ್ರಾದೇಶಿಕ ಸೊಗಡಿನಿಂದ ಕೂಡಿದೆ, ಹಾಗಾಗಿ ಉತ್ತರ ಕರ್ನಾಟಕದ ಸಂವಾದ ಶೈಲಿಗಳಲ್ಲಿನ ಆಪ್ತತೆಗಳು ಗಮನಸೆಳೆಯುತ್ತವೆ, ಇದೇ ಸಂದರ್ಭದಲ್ಲಿ ಕೃತಿಯಕಥಾವಸ್ತುವಿಗೆ ತಕ್ಕಂತೆ ಡಿಜಿಟಲ್ ತಂತ್ರಗಳನ್ನು ಒಳಗೊಂಡ ಪದಪ್ರಯೋಗಗಳು ಢಾಳವಾಗಿ ಸೇರ್ಪಡೆಗೊಂಡಿರುವುದರಿಂದ ಕೆಲವೊಮ್ಮೆ ಓದುಗರ ಸಂಯಮವನ್ನು ಆಪೇಕ್ಷಿಸುತ್ತವೆ. ಸಿನಿಮಾದ ಕ್ಲೈಮ್ಯಾಕ್ಸ್‌ನಲ್ಲಿ ಕೊನೆಗೂ ಮನುಷ್ಯ ಸಂಬಂಧಗಳ ಬೆಸುಗೆಯ ಪ್ರೀತಿಗೆ ಗೆಲುವು ಕಂಡು ಓದುಗರನ್ನು ರಂಜಿಸುತ್ತದೆ.

ಜಗತ್ತಿನ ಬೇರೆ ಬೇರೆ ದೇಶಗಳಲ್ಲಿ ವಿಜ್ಞಾನಿಗಳು ಡಿಜಿಟಲ್ ತಂತ್ರಜ್ಞಾನದಿಂದ ಸಿನಿಮಾತಯಾರಿಸುವ ಪ್ರಯತ್ನಗಳಬಗ್ಗೆಚಿಂತಿಸುವುದನ್ನುಕೇಂದ್ರವಾಗಿಟ್ಟುಕೊಂಡ ಡ್ಯಾನ್ ಬ್ರೌನ್‌ನ ಒರಿಜಿನ್ (2017) ಕಾದಂಬರಿ, ಜಪಾನಿನ ರೋಬೋಟ್ ತಯಾರಿಕಾ ವಿಜ್ಞಾನಿಗಳ ಬಯೋಹೈಬ್ರಿಡ್ ರೋಬೋಟ್‌ಗಳು ಜೀವದ ಸೃಷ್ಟಿಗೆ ದೇವರ ಹಂಗಿಲ್ಲ ಎಂಬ ವಾದವನ್ನು ಮುಂದಿಟ್ಟುಕೊಂಡು ಹೊರಟ ಮಾದರಿಗಳು. ಧರ್ಮ ಮತ್ತು ವಿಜ್ಞಾನದ ನಡುವೆ ಸಂಘರ್ಷಗಳನ್ನು ಹುಟ್ಟುಹಾಕುತ್ತಿವೆಯೇ ಎಂಬ ಪ್ರಶ್ನೆಯನ್ನು ಮುಂದಿಡುತ್ತಾ ನಿಸರ್ಗವನ್ನು ದೇವರೆಂದು ಬಗೆದಲ್ಲಿ ಸಂಘರ್ಷಕಕ್ಕೆ ಅವಕಾಶವಿರದೆಂಬ ತೀರ್ಮಾನ ಇದಕ್ಕೆ ಪೂರಕವಾಗಿ ವಿಜ್ಞಾನವಿಲ್ಲದ ಧರ್ಮ ಕುರುಡು, ಧರ್ಮ ವಿಲ್ಲದ ವಿಜ್ಞಾನಕುಂಟು ಎಂಬ ಐನ್‌ಸ್ಟೈನ್‌ರ ಚಿಂತನೆಗಳು ಕೊನೆಗೆ ಧರ್ಮವೆನ್ನುವುದು ವಿಶ್ವಧರ್ಮ (Cosmic Religion) ಇಲಿ ಪ್ರಜ್ಞೆಯ ಬಗ್ಗೆ ಬೆಳಕು ಚೆಲ್ಲುವ ಪ್ರಯತ್ನಗಳ ಅಗತ್ಯವಿದೆ. ಕೃತಕ ಬುದ್ಧಿ ಮತ್ತೆ ತಂತ್ರಜ್ಞಾನದಿಂದ ಮನುಷ್ಯನ ಮತ್ತಿತರೇ ಜೀವಿಗಳನ್ನು ಸೃಷ್ಟಿಸುವ, ಸಂವಹನಿಸುವ, ಮನುಷ್ಯನ ಮಧುರ ಭಾವಗಳಾದ ಪ್ರೀತಿ, ಪ್ರೇಮ, ಪ್ರಣಯ, ನೋವು ನಲಿವುಗಳಂತಹ ನಡವಳಿಕೆಗಳನ್ನು ಪ್ರತಿಸೃಷ್ಟಿಸುವ ಪ್ರಯತ್ನಗಳು ನಡೆಯುತ್ತಿವೆ. ಇವುಗಳ ಅನುಕರಣೆಯ ಬಗೆಗಿನ ಚರ್ಚೆಗಳು ಸಹ ಅಷ್ಟೆ ಗಂಭೀರವಾಗಿ ನಡೆಯುತ್ತಿರುವುದು ನಮಗೆ ಅಷ್ಟಾಗಿ ಅರಿವಿಗೆ ಬರದೇ ಹೋಗಿರಬಹುದು. ಆದರೆ ಅದನ್ನು ತಮ್ಮ ಕೃತಿಯ ವಸ್ತುವಿನ ಮೂಲಕ ನಮಗೆ ಮನದಟ್ಟು ಮಾಡಿಕೊಡುವ ಪ್ರಯತ್ನಗಳನ್ನು ಕಾದಂಬರಿಕಾರರು ಮಾಡಿಕೊಡುತ್ತಾರೆ.

ವಿಜಯನಗರ

ಶನಿವಾರ / Saturday 21.09.2024

ಹಂಪಿ ಟೈಮ್ಸ್
HAMPI TIMES

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಭಾದ್ರಪದ । ಸಂವತ್ಸರ: ಕ್ರೋಧಿ

**21–09–2024 – ಶನಿವಾರ**

| | |
|---|---|
| ತಿಥಿ | : ಚತುರ್ಥಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಭರಣಿ |
| ಯೋಗ | : ವ್ಯಾಘಾತ |
| ಕರಣ | : ಭವ |
| ಸೂರ್ಯೋದಯ | : 06:16:28 |
| ಸೂರ್ಯಾಸ್ತ | : 18:23:53 |
| ರಾಹು ಕಾಲ | : 09:18–10:49 |
| ಯಮಘಂಡ ಕಾಲ | : 13:50–15:21 |
| ಗುಳಿಕ ಕಾಲ | : 06:16–07:47 |

## ತುಂಗಭದ್ರಾ ನೀರಿನ ಮಟ್ಟ



ಶುಕ್ರವಾರ : 20–09–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1632.00 ಅಡಿ |
| ಒಳ ಹರಿವು | 10699 ಕ್ಯುಸೆಕ್ |
| ಹೊರ ಹರಿವು | 10132 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 101.773 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1620.56 ಅಡಿ |
| ಒಳ ಹರಿವು | 4378 ಕ್ಯುಸೆಕ್ |
| ಹೊರ ಹರಿವು | 9968 ಕ್ಯುಸೆಕ್ |
| ಸಾಮರ್ಥ್ಯ | 62.915 ಟಿಎಂಸಿ |

# ಕತ್ತೆ ಹಾಲು ನಂಬಿ ಮೋಸ ಹೋದ ರೈತರಿಗೆ ಹಣ ವಾಪಸ್ ಕೊಡಿಸಿ



■ **ಹಂಪಿ ಟೈಮ್ಸ್ ಹೊಸಪೇಟೆ**

ಕರ್ನಾಟಕದಾದ್ಯಂತ ಜನ್ನಿ ಮಿಲ್ಕ್ ಕಂಪನಿಯಿಂದ ಮೋಸ ಹೋದ ರೈತರಿಗೆ ಹಣ ಹಿಂತಿರುಗಿಸುವಂತೆ ಕ್ರಮಕೈಗೊಳ್ಳಬೇಕೆಂದು ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಎಸ್ಪಿ ಬಿ.ಎಲ್.ಶ್ರೀಹರಿ ಬಾಬುಗೆ ಶುಕ್ರವಾರ ಮನವಿ ಸಲ್ಲಿಸಿತು.

ಸೇನೆಯ ತಾಲೂಕಧ್ಯಕ್ಷ ಸಣ್ಣಕ್ಕಿ ರುದ್ರಪ್ಪ ಮಾತನಾಡಿ, ಕರ್ನಾಟಕ ರಾಜ್ಯದಲ್ಲಿ ವಿಜಯನಗರ ಜಿಲ್ಲೆ ಸೇರಿದಂತೆ ಹಲವಾರು ಜಿಲ್ಲೆಗಳಲ್ಲಿ ರೈತರು ಜನ್ನಿ ಮಿಲ್ಕ್ (ಕತ್ತೆ ಹಾಲು) ಕಂಪನಿಗೆ ಹಣವನ್ನು ಸಂದಾಯ ಮಾಡಿರುತ್ತಾರೆ. ಯಾವುದೇ ರೀತಿಯಾಗಿ ಸರ್ಕಾರದ ಪರವಾನಿಗೆ ಮತ್ತು ಮನ್ನಣೆ ಪಡೆಯದೇ ಇರುವುದು ಕಂಡುಬಂದಿರುತ್ತದೆ. ಜಿಲ್ಲಾಧಿಕಾರಿಗಳು ಇದರ ಬಗ್ಗೆ ಸೂಕ್ತ ತನಿಖೆ ನಡೆಸುವುದರ ಮೂಲಕ ಕ್ರಮ ಕೈಗೊಂಡು ಕಂಪನಿಯನ್ನು ಸೀಜ್ ಮಾಡಿರುತ್ತಾರೆ. ಈಗಾಗಲೇ ಬಹಳಷ್ಟು ರೈತರು ಹಣವನ್ನು ಕಂಪನಿಯ ಹೆಸರಿನಲ್ಲಿ ಸಂದಾಯ ಮಾಡಿರುತ್ತಾರೆ. ಮೋಸ, ವಂಚನೆಗೆ ಒಳಗಾದ ರೈತರಿಗೆ ನೆರವಾಗುವಂತೆ ನ್ಯಾಯ ದೊರಕಿಸಿ ಅವರಹಣವನ್ನುಹಿಂದಿರುಗಿಸಿಕೊಡಿಸಬೇಕೆಂದು ಒತ್ತಾಯಿಸಿದರು.

ಜಿಲ್ಲಾಧ್ಯಕ್ಷ ಟಿ.ನಾಗರಾಜ ಮಾತನಾಡಿ, ಆರೋಪಿಗಳ ವಿರುದ್ಧ ಶೀಘ್ರ ಕ್ರಮ ಜರುಗಿಸಿ ರೈತರಿಗೆ ನ್ಯಾಯ ದೊರಕಿಸಿಕೊಡದಿದ್ದರೆ, ಮುಂದಿನ ದಿನಗಳಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ವತಿಯಿಂದ ರಾಜ್ಯಾದ್ಯಂತ ತೀವ್ರ ಹಾಗೂ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದರು.

ರೈತ ಮುಖಂಡರಾದ ಬಿ.ಜಾಕೀರ್‌ಹುಸೇನ್, ಹೆಚ್.ಸತೀಶ್, ಡಿ.ಸಾಗರ್, ಕೆ.ರಾಮಾಂಜಿನಿ, ರೇವಣಸಿದ್ದಪ್ಪ, ಮತ್ತು ಇನ್ನಿತರೆ ಮೋಸ ಹೋದ ರೈತರು ಭಾಗವಹಿಸಿದ್ದರು.



### ಸಂಘದ ಅಧ್ಯಕ್ಷ ಬಿ. ಮೇಘನಾಥ ಹೇಳಿಕೆ

# ಅಮರಾವತಿ ಕೃಷಿ ಸಹಕಾರ ಸಂಘಕ್ಕೆ 30.40 ಲಕ್ಷ ರೂ ಲಾಭ, ಶೇ.10 ಲಾಭಾಂಶ ಹಂಚಿಕೆ




■ **ಹಂಪಿ ಟೈಮ್ಸ್ ಹೊಸಪೇಟೆ**

ಅಮರಾವತಿ ವಿವಿದೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘ ನಿ., 2023–24 ನೇ ಸಾಲಿನಲಲ್ಲಿ ರೂ.30.40 ಲಕ್ಷ ರೂ ನಿವ್ವಳ ಲಾಭ ಗಳಿಸಿದೆ ಎಂದು ಸಂಘದ ಅಧ್ಯಕ್ಷ ಬಿ. ಮೇಘನಾಥ ತಿಳಿಸಿದರು.

ನಗರದ ಸಂಘದ ಕಚೇರಿಯಲ್ಲಿ 64ನೇ ವಾರ್ಷಿಕ ಮಹಾಸಭೆ ಅಧ್ಯಕ್ಷತೆವಹಿಸಿ ಗುರುವಾರ ಮಾತನಾಡಿದರು. ಸಂಘವು 1334 ಜನ ಸದಸ್ಯರನ್ನು, 88.21 ಲಕ್ಷ ರೂ ಷೇರು ಬಂಡವಾಳ ಹೊಂದಿದೆ. 627.65 ಲಕ್ಷ ರೂ ಠೇವಣೆ ಸಂಗ್ರಹಿಸಿದೆ. ಕೃಷಿ ಉದ್ದೇಶಗಳಿಗಾಗಿ ಅಲ್ಪಾವಧಿ ಬೆಳೆ ಸಾಲ ಮತ್ತು ಬಿ.ಡಿ.ಪಿ ಯೋಜನೆಯಡಿಯಲ್ಲಿ ಕೃಷಿಯೇತರ ಉದ್ದೇಶಗಳಿಗಾಗಿ ನಗದು ಪತ್ತಿನ ಸಾಲ, ಮಾಧ್ಯಮಾವಧಿ ಕೃಷಿಯೇತರ ಸಾಲ, (ದ್ವಿಚಕ್ರ & ಕಾರ್) ವಾಹನ ಖರೀದಿಸಲು, ಬಂಗಾರ ಸಾಲ ಮತ್ತು ಠೇವಣೆ ಸಾಲ, ಸಿಬ್ಬಂದಿ ಗೃಹ ಸಾಲ, ವೇತನಾಧರಿತ

ಸಾಲ, ಅಡಮಾನ ಸಾಲ ಸೇರಿ ರೂ. 1005.98 ಲಕ್ಷ ಸಾಲ ವಿತರಿಸಿದ್ದು, ಶೇ 96.96 ರಷ್ಟು ಸಾಲ ವಸೂಲಾತಿ ಆಗಿದೆ. 2023–24ನೇ ಸಾಲಿನ ಲೆಕ್ಕ ತಪಾಸಣೆ ಆಧಾರದ ಮೇಲೆ ಸಂಘಕ್ಕೆ 'ಎ' ಶ್ರೇಣಿ ಲಭಿಸಿದೆ. ಸದಸ್ಯರಿಗೆ ಶೇ. 10 ಲಾಭಾಂಶ ವಿತರಿಸಲು ನಿರ್ಧರಿಸಲಾಗಿದೆ ಎಂದರು

ಸಂಘದಲ್ಲಿ ಸಾಮಾನ್ಯ ಸೇವಾ ಕೇಂದ್ರ ಹಾಗೂ ಶುದ್ದ ಕುಡಿಯುವ ನೀರಿನ ಘಟಕ ಪ್ರಾರಂಭಿಸಲಾಗಿದೆ. ಕೆ.ಸಿ.ಸಿ. ಅಲ್ಪಾವಧಿ ಬೆಳೆ ಸಾಲ ಡ್ರಾಯಲ್‌ನ್ನು ಆನ್ಲೈನ್ ಮೂಲಕ ಬಿ.ಡಿ.ಸಿ.ಸಿ ಬ್ಯಾಂಕ್‌ಗೆ ರವಾನಿಸಿ ರೈತ ಸದಸ್ಯರ ಬ್ಯಾಂಕ್ ಉಳಿತಾಯ ಖಾತೆ ಜಮಾ ಹೊಂಂದಾಣಿಕೆ ಮಾಡಿರುತ್ತೇವೆ. ಬಿಡಿಸಿಸಿ ಬ್ಯಾಂಕಿನ ಸಹಯೋಗದೊಂದಿಗೆ ಮೈಕ್ರೋ ಎಟಿಎಂ, ಯುಪಿಐ ವ್ಯವಸ್ಥೆ ಮಾಡಲಾಗಿದೆ ಎಂದರು.

ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿ. ಪರೀಕ್ಷೆಗಳಲ್ಲಿ ಅತ್ಯಧಿಕ ಅಂಕ ಗಳಿಸಿದ ಮೂರು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನಗದು ರೂಪದಲ್ಲಿ ನೀಡಲಾಯಿತು. ಮತ್ತು ಸಂಘದ ಅತ್ಯಂತ ಹಿರಿಯ ರೈತ ಸದಸ್ಯರಿಗೆ ಉತ್ತಮ ಸಹಕಾರಿ ಸದಸ್ಯ ಪ್ರಶಸ್ತಿ ಪತ್ರವನ್ನು ವಿತರಿಸಿ ಸನ್ಮಾನಿಸಲಾಯಿತು.

ಸಂಘದ ಉಪಾಧ್ಯಕ್ಷ ಬಿ.ವಿಶ್ವನಾಥ ನಿರ್ದೇಶಕರಾದ ಎಲ್.ಎಸ್.ಆನಂದ, ಆರ್. ಚಿನ್ನದೊರೈ, ಎಸ್.ಗಾಳೆಪ್ಪ, ಎಂ.ವಿರುಪಾಕ್ಷಯ್ಯ, ಕೆ.ಎಸ್.ಹನುಮಂತಪ್ಪ, ಜಿ. ಚಂದ್ರಶೇಖರ, ಡೊಮ್ಮಿ ಮೂರ್ತೆಪ್ಪ, ಕೆ.ಎಸ್.ಹೆಚ್.ಶ್ರೀನಿವಾಸ, ಹೆಚ್. ಎಂ.ಶಶಿಕಲಾ, ಪುಷ್ಪಲತಾ, ಆರ್ಥಿಕ ಬ್ಯಾಂಕ್ ಪ್ರತಿನಿಧಿ ಎ.ಮಂಜುನಾಥ ರೆಡ್ಡಿ ಹಾಗೂ ಮು.ಕಾ.ನಿ ಯವರಾದ ಹುಲಿಕುಂಟಪ್ಪ ಬಣಕಾರ ಇತರರು ಇದ್ದರು.

# ಡಾ. ಹ್ಯಾರಡದ ರೇಣುಕ ಅವರ ಕೃತಿಗಳ ಬಿಡುಗಡೆ

**ಮೊದಲ ಪುಟದಿಂದ**

"ವಚನ ವ್ಯಾಕರಣ" ಪುಸ್ತಕ ಪರಿಚಯ ನೀಡುವರು. ಮುಖ್ಯ ಅತಿಥಿಗಳಾಗಿ ವಿಜಯನಗರ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ ಕೆ.ರವೀಂದ್ರನಾಥ, ಹೊಸಪೇಟೆಯ ವಿಜಯನಗರ ಮಹಾ ವಿದ್ಯಾಲಯ ವಿಶ್ರಾಂತ ಪ್ರಾಧ್ಯಾಪಕರಾದ ಡಾ. ಮೃತ್ಯುಂಜಯ ರುಮಾಲೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಪ್ರಭಾರಿ ಉಪ ನಿರ್ದೇಶಕರಾದ ಓ.ಆರ್.ಪ್ರಕಾಶ್, ಹೊಸಪೇಟೆ ಕ್ಷೇತ್ರ ಶಿಕ್ಷಣಾಧಿಕಾರಿ ಚನ್ನಬಸಪ್ಪ ಎಂ., ಹಂಪಿ ಕನ್ನಡ ವಿಶ್ವವಿದ್ಯಾಲಯ ಕ.ಸಾ.ಅ.ವಿ. ಮುಖ್ಯಸ್ಥರಾದ ಡಾ. ಮಲ್ಲಿಕಾರ್ಜುನ ವಣೇನೂರು, ವಿಶ್ರಾಂತ ಪ್ರಾಧ್ಯಾಪಕ 'ರಾದ ಡಾಅಮರೇಶ ನುಗುಡೋಣಿ, ಹಂಪಿ ಕನ್ನಡ ವಿವಿ ಪ್ರಾಧ್ಯಾಪಕರಾದ ಡಾ. ವೆಂಕಟಗಿರಿ ದಳವಾಯಿ, ಗದಗ ವಿದ್ಯಾನಿಧಿ ಪ್ರಕಾಶನದ ಪ್ರಕಾಶಕರಾದ ಡಾ.ಜಯದೇವಪ್ಪ ಮೆಣಸಿಗಿ ಅವರು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದೆ.

## ಉದ್ಯೋಗ ಕೊಡಿ ಪ್ರಕಟಣೆ ಉಚಿತ!

ಕೆಲಸಕ್ಕೆ ಬೇಕಾಗಿದ್ದಾರೆ ಎಂದು ಉದ್ಯಮಿಗಳು ಜಾಹೀರಾತು ನೀಡುವುದು ಈವರೆಗೆ ನಡೆದು ಬಂದ ಪರಂಪರೆ. ಆದರೆ, ಬದಲಾದ ಜೀವನ ಶೈಲಿಯಲ್ಲಿ ಜಾಹೀರಾತು ಹಾಗೂ ಬೇಡಿಕೆಗಳು ಬದಲಾಗುತ್ತಿವೆ. ಈ ನಿಟ್ಟಿನಲ್ಲಿ ಪತ್ರಿಕೆ ಉದ್ಯಮಿಗಳನ್ನು ಭೇಟಿ ಮಾಡದೆ ಶಿಕ್ಷಣ, ಅನುಭವ ಸಹಿತ ನಿರುದ್ಯೋಗಿಗಳ ವಿವರ ನೀಡಿ 'ಉದ್ಯೋಗ ಕೊಡಿ' ಎಂಬ ಶೀರ್ಷಿಕೆಯಡಿ ನಿರುದ್ಯೋಗಿಗಳ ವಿವರ ಹಂಪಿ ಟೈಮ್ಸ್ ಪ್ರಕಟಿಸಿ, ಉದ್ಯಮಿ – ನಿರುದ್ಯೋಗಿಗಳಿಗೆ ಸೇತುವೆಯಾಗಲಿದೆ.

ಉದ್ಯೋಗ ಹುಡುಕುವ ನಿರುದ್ಯೋಗಿ ಗಳು, ಕೆಲಸ ಮಾಡಲೇ ಬೇಕೆಂಬ ಉದ್ಯೋಗಾಕಾಂಕ್ಷಿಗಳು ತಮ್ಮ ಸ್ವ–ವಿವರಗಳನ್ನು ಹಂಪಿ ಟೈಮ್ಸ್ ಇ–ಮೇಲ್‌ಗೆ ಕಳುಹಿಸಿದಲ್ಲಿ, ಕೆಲಸ ಕೊಡಿ ಕಾಲಂನಡಿ ಉಚಿತವಾಗಿ ಪ್ರಕಟಿಸಲಾಗುತ್ತದೆ. ಅರ್ಹತೆ ಆಧರಿಸಿ ಉದ್ಯಮಿಗಳೇ ಉದ್ಯೋಗಾಂಕ್ಷಿಗಳನ್ನು ಸಂಪರ್ಕಿಸಿ ಕೆಲಸ ನೀಡಲು ಇದು ಸಹಕಾರಿಯಾಗಲೆಂಬ ಸದಾಶಯ ಹಂಪಿ ಟೈಮ್ಸ್ ಬಳಗದ್ದಾಗಿದೆ. ನಿಮ್ಮ ಸ್ವ–ವಿವರವನ್ನು ಕೆಳಗಿನ ಇಮೇಲ್‌ಗೆ ಕಳುಹಿಸಿ. ಅಥವ ಕಚೇರಿಗೆ ತಲುಪಿಸಿ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
hampitimes@gmail.com
**9448633038**

# ವಲಭಾಪುರ ಹಾಸ್ಟೆಲ್‌ಗೆ ಡಿಸಿ ಭೇಟಿ, ಸೌಲಭ್ಯಗಳ ಪರಿಶೀಲನೆ



■ **ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ವಲಭಾಪುರ ಮುರಾರ್ಜಿ ದೇಸಾಯಿ ವಸತಿ ಶಾಲೆಗೆ ಜಿಲ್ಲಾಧಿಕಾರಿ ಎಂ.ಎಸ್ ದಿವಾಕರ ಬುಧವಾರ ಅನಿರೀಕ್ಷಿತವಾಗಿ ಭೇಟಿ ನೀಡಿ, ಹಾಸ್ಟೆಲ್ ಸೌಲಭ್ಯಗಳನ್ನು ಪರಿಶೀಲನೆ ಮಾಡಿದರು.

ಹಾಸ್ಟೆಲ್‌ನಲ್ಲಿರುವ ಮೂಲಭೂತ ಸೌಕರ್ಯಗಳ ವ್ಯವಸ್ಥೆ, ಶೈಕ್ಷಣಿಕ ಕಾರ್ಯ ಚಟುವಟಿಕೆಗಳು ಸೇರಿದಂತೆ ಇತರೆ ಸೌಲಭ್ಯಗಳ ಬಗ್ಗೆ ಖುದ್ದಾಗಿ ಪರಿಶೀಲಿಸಿದ ಜಿಲ್ಲಾಧಿಕಾರಿಗಳು, ಮಕ್ಕಳಿಗೆ ನೀಡುವ ಬೆಳಿಗ್ಗೆಯ ಉಪಹಾರ, ಮಧ್ಯಾಹ್ನ ಮತ್ತು ರಾತ್ರಿಯ ಊಟ ಹಾಗೂ ಸಾಯಂಕಾಲ ನೀಡುವ ಲಘು ಉಪಹಾರಗಳ ಬಗ್ಗೆ ನೇರವಾಗಿ ಮಕ್ಕಳಿಂದಲೇ ಮಾಹಿತಿಯನ್ನು ಪಡೆದರು ಹಾಗೂ ವಿದ್ಯಾಭ್ಯಾಸದ ಕುರಿತು ವಿಚಾರಿಸಿದರು.

ಬಳಿಕ ವಿದ್ಯಾರ್ಥಿಗಳೊಂದಿಗೆ ಮಾತನಾಡುತ್ತಾ ಶಿಕ್ಷಣದಿಂದ ಸರ್ವಾಂಗೀಣ ಅಭಿವೃದ್ಧಿ ಸಾಧ್ಯ, ಎಲ್ಲಾ ಮಕ್ಕಳು ಉತ್ತಮವಾಗಿ ಅಭ್ಯಾಸ ಮಾಡಿ, ಐ.ಎ.ಎಸ್., ಐ.ಪಿ.ಎಸ್., ಕೆ.ಎ.ಎಸ್.ಗಳಂತೆ ಹುದ್ದೆಗಳಿಗೆ ಹೋಗುವ ಗುರಿಯನ್ನು ಹೊಂದಬೇಕು. ಶಿಕ್ಷಣದಲ್ಲಿ ಯಶಸ್ವಿ ಸಾಧಿಸಿ ನಿಮ್ಮ ತಂದೆ ತಾಯಿ, ಊರು, ಜಿಲ್ಲೆ, ರಾಜ್ಯ ಹಾಗೂ ದೇಶಕ್ಕೆ ಕೀರ್ತಿ ತರಬೇಕು ಎಂದು ಕಿವಿ ಮಾತು ಹೇಳಿದರು.

ಈ ಸಂದರ್ಭದಲ್ಲಿ ವಲಭಾಪುರ ಮುರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಚಾರ್ಯರು, ಹಾಸ್ಟೆಲ್ ವಾರ್ಡನ್, ಶಿಕ್ಷಕರು ಇತರರು ಇದ್ದರು.

# ನಾಟಕ ಮತ್ತು ದೃಶ್ಯ ಕಲಾ ಕೋರ್ಸ್ ಆರಂಭ ಕೊಪ್ಪಳ ವಿವಿ ಕುಲಪತಿ ಪ್ರೊ. ಬಿ.ಕೆ.ರವಿ ಹೇಳಿದರು

■ **ಹಂಪಿ ಟೈಮ್ಸ್ ಹೊಸಪೇಟೆ**

ಜನ ಸಾಮಾನ್ಯರಲ್ಲಿ ಸಾಂಸ್ಕೃತಿಕ ಪ್ರಜ್ಞೆ ಮೂಡಿಸುವುದು ಹಾಗೂ ಕಲ್ಯಾಣ ಕರ್ನಾಟಕ ಭಾಗದ ಕಲಾವಿದರ ಶೈಕ್ಷಣಿಕ ಪ್ರಗತಿಯ ಗುರಿ ಉದ್ದೇಶಗಳೊಂದಿಗೆ ಕೊಪ್ಪಳ ವಿಶ್ವವಿದ್ಯಾಲಯದಲ್ಲಿ 2024–25 ನೇ ಸಾಲಿಗೆ ನಾಟಕ ಮತ್ತು ದೃಶ್ಯ ಕಲಾ ಕೋರ್ಸುಗಳನ್ನು ಆರಂಭಿಸಲಾಗುವುದು ಎಂದು ಕುಲಪತಿ ಪ್ರೊ. ಬಿ.ಕೆ.ರವಿ ಹೇಳಿದರು.

ಕೊಪ್ಪಳ ಕಲಾವಿದರ ನೆಲೆಬೀಡಾಗಿದ್ದು, ಕಿನ್ನಾಳ ಚಿತ್ರಕಲೆಗೆ ಪ್ರಸಿದ್ಧಿ ಪಡೆದಿದೆ ಇಂತಹ ದೇಶಿಯ ಕಲೆಗಳ ಉಳಿವಿಗಾಗಿ ಮತ್ತು ಅಭಿವೃದ್ಧಿಗೆ ಸಾಂಸ್ಕೃತಿಕ ಇಲಾಖೆಗಳು ಶ್ರಮಿಸುತ್ತಿರುವ ಹೊತ್ತಿನಲ್ಲಿ ಉತ್ತರ ಕರ್ನಾಟಕದ ರಂಗಭೂಮಿ ಇಂದು ಸಾಂಸ್ಕೃತಿಕ ಲೋಕಕ್ಕೆ ತನ್ನದೇ ಆದ ಕೊಡುಗೆ ನೀಡುತ್ತಿದೆ ಆದ್ದರಿಂದ ಶಿಕ್ಷಣದಲ್ಲಿ ಈ ಕೋರ್ಸ್‌ಗಳನ್ನು ಆರಂಭಿಸುವ ಮೂಲಕ ಲಲಿತ ಕಲೆಗಳ ಪ್ರಾಮುಖ್ಯತೆಯ ಅರಿವು ಮೂಡಿಸುವುದು ನಮ್ಮ ಆದ್ಯ ಕರ್ತವ್ಯವಾಗಿದೆ ಎಂದರು.

ಲಲಿತ ಕಲಾ ಅಕಾಡೆಮಿಯ ಅಧ್ಯಕ್ಷರಾದ ಪ.ಸ.ಕುಮಾರ್ ಮಾತನಾಡಿ, ಕೊಪ್ಪಳ ಜಿಲ್ಲೆಯ ಕಲೆಗಳಿಗೆ ಮತ್ತು ರಂಗಭೂಮಿ ಬೆಳವಣಿಗೆಗೆ ನಾಟಕ ಮತ್ತು ದೃಶ್ಯ ಕಲಾ ಕೋರ್ಸ್‌ಗಳ ಆರಂಭಿಸುವ ನಿರ್ಧಾರ ತುಂಬಾ ಔಚಿತ್ಯಪೂರ್ಣವಾಗಿದೆ. ಈ ಅವಕಾಶವನ್ನು ವಿದ್ಯಾರ್ಥಿಗಳು ಸದುಪಯೋಗ ಪಡೆದುಕೊಳ್ಳಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಪ.ಸ.ಕುಮಾರ ಅವರಿಗೆ ಸನ್ಮಾನಿಸಲಾಯಿತು. ಸಭೆಯಲ್ಲಿ ಕುಲಸಚಿವರಾದ ಪ್ರೊ.ಕೆ.ವಿ.ಪ್ರಸಾದ್, ನಿರ್ದೇಶಕರಾದ ಪ್ರಕಾಶ ಯಳವಟ್ಟಿ ಹಾಗೂ ಪ್ರವೀಣ್ ಪಾಟೀಲ್ ಇದ್ದರು.

# SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi | ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: **https://epaper.hampitimes.com**

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಹಿಂದಿ

**10 ನೇ ತರಗತಿ ಮಾದರಿ ಪ್ರಶ್ನೆ- ಪತ್ರಿಕೆ ಹಿಂದಿ**

दसवीं कक्षा प्रथम संकलनात्मक परीक्षा : 2024 - 25
अंक : 80 हिन्दी समय : 3 घंटे

**I निम्नलिखित प्रश्नों के लिए चार - चार विकल्प दिए गए हैं, उनमें से सर्वाधिक उचित विकल्प चुनकर लिखिए:8 x 1 = 8**

1) ' किताब ' शब्द का अन्य वचन शब्द है -
अ) किताबें आ) किताबों इ) किताब ई) पुस्तक
2) ' भाई ' शब्द का अन्य लिंग शब्द है -
अ) माता आ) दादी इ) बहन ई) सहेली
3) ' ईमान ' शब्द का विलोम शब्द है -
अ) विमान आ) बेईमान इ) अच्छा ई) महल
4) ' लिखना ' शब्द का प्रथम प्रेरणार्थक शब्द है -
अ) लिखाना आ) लिखोना इ) लिखवाना ई) लिख
5) तुम्हारा नाम क्या है ? इस वाक्य में प्रयुक्त विराम चिह्न है -
अ) पूर्ण विराम आ) योजक
इ) अल्प विराम ई) प्रश्नार्थक
6 )राम ----पत्नी सीता है । रिक्त स्थन में कारक आता है -
अ) में आ) पर इ) की ई ) ने
7) ' गणेश ' शब्द -------------संधि का उदाहरण है ।
अ ) दीर्घ संधि आ) गुण संधि
इ) यण संधि ई) अयादि संधि
8) ' पौ फटना ' - इस मुहावरें का अर्थ है -
अ) प्रभात होना आ) काम आना
इ) भूख लगना ई) भाग जाना

**II निम्नलिखित प्रथम दो शब्दों के सूचित संबंधों के अनुरूप तीसरे शब्द का संबंधित शब्द लिखिए : 4 x 1 = 4**

9 सेब : फल :: गाजर : ____________
10 गांधीजी : राष्ट्रपिता : अब्दुल कलाम : ________
11 वसीयत : नाटक :: चित्रलेखा : __________
12 गिल्लू : रेखाचित्र :: ईमानदारों के सम्मेलन में : _____

**III निम्नलिखित प्रश्नों के उत्तर एक -एक वाक्य में लिखिए : 4 x 1 = 4**

13 रोज एक सेब खाने से किनकी जरूरत नही होगी ?
14 इंटनेट का अर्थ क्या है ?
15 आज की दुनिया कैसी है ?
16 तुलसीदास जी के अनुसार विपत्ति के साथी कौन है ?

**IV निम्नलिखित प्रश्नों के उत्तर दो -तीन वाक्यों में लिखिए : 8 x 2 = 16**

17 कश्मीरी सेब पाठ से आपको क्या सीख मिलती है ?
18 भारत माँ के प्रकृति-सौंदर्य का वर्णन कीजिए । ?
19 जैनुलाबदीन नमाज के बारे में क्या कहते थे ?
20 बसंत राजकिशोर से दो पैसे लेने से क्यों इनकार करता है ?
21 दिनकर जी के अनुसार मानव का सही परिचय क्या है ?
22 व्यापार और बैंकिग में इंटरनेट से क्या मदद मिलती है ?
23 शनि किसका पुत्र है ? और "शनै:चर" का अर्थ क्या है ? **अथवा**
सौर-मंडल का सबसे बडा ग्रह कौन-सा है और सौर-मंडल में शनि ग्रह का स्थान क्या है ?
24 शनि का निर्माण किस प्रकार हुआ है ? **अथवा**
शनि का उपग्रह टाइटान के बारे में लिखिए ।

**V निम्नलिखित प्रश्नों के उत्तर तीन-चार वाक्यों में लिखिए : 9 x 3 =27**

25 लेखिका ने गिल्लू के प्राण कैसे बचाये ?
26 मातृभमि का स्वरूप कैसे सुशोभित है ?
27 " सोशल नेटवर्किंग " एक क्रातिकारी खोज है । कैसे ?
28 आधुनिक मनुष्य की भौतिक साधना क्या- क्या है ?
29 शम्सुद्दीन अखबरों के वितरण का कार्य कैसे करते थे ?
30 लेखक को भेजे गये निमंत्रण पत्र में क्या लिखा गया था ?
31 गिल्लू के कार्य- कलाप के बारे में लिखिए ।
32 दोहे का भावार्थ अपने शब्दों में लिखिए :
मुखिया मुख सों चाहिए, खान पान को एक ।
पालै पोसै सकल अंग, तुलसी सहित विवेक ॥
33 गध्यांश का अनुवाद कन्नड में कीजिए :
टोमाटो भोजन का आवश्यक अंग बन गया है । गाजर भी पहले गरीबों के पेट भरने की चीज थी । गाजर में भी बहुत विटामिन है ; इसलिए गाजर को भी मेजों पर स्थान मिलने लगा है ।

**VI निम्नलिखित प्रश्नों के उत्तर पाँच-छ: वाक्यों में लिखिए : 2 x 4= 8**

34 बसंत ईमादार लडका है । कैसे ? **अथवा**
पंडित राजकिशोर के मानवीय व्यवहार का परिचय दीजिए ।
35 निम्नलिखत कवितांश पूर्ण कीजिए :
दया धर्म ________________________________
________________________________घट में प्राण ॥

**ಮುಂದುವರೆಯುವುದು --------**

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : **ಹೆಚ್.ತುಕಾರಾಮ್ ನಾಯ್ಕ**, ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಮಗಿಮಾವಿನಹಳ್ಳಿ, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ)

**ಕ.ರಾ.ಮಕ್ಕಳ ಸಾಹಿತ್ಯ ಪರಿಷತ್, ವಿಜಯನಗರ ಜಿಲ್ಲೆ**

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055